ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ಮುಖ ಪತ್ರಿಕೆ

ಸಂಪುಟ 1 | ಸಂಚಿಕೆ 35 | ನವೆಂಬರ್ 11, 1979 | 40 ಪೈಸೆ

ಕೋಮುವಾರು ಶಕ್ತಿಗಳನ್ನೆದುರಿಸಿ

ನವೆಂಬರ್ ಒಂದರಂದು ರಾಜ್ಯಾದ್ಯಂತ ಕನ್ನಡ ರಾಜ್ಯೋತ್ಸವವು ವಿಜೃಂಭಣೆಯಿಂದ ನಡೆಯಿತು. ಈ ವರ್ಷ ಮುಸಲ್ಮಾನ ಬಂಧುಗಳ ಬಕ್ರೀದ್ ಹಬ್ಬವೂ ಅಂದೇ ಬಂದು ರಾಜ್ಯೋತ್ಸವಕ್ಕೆ ಹೆಚ್ಚಿನ ಕಳೆ ಕೊಟ್ಟಿತು. ಆದರೆ ನಮ್ಮ ರಾಜ್ಯದ ರಾಜಧಾನಿಯಾದ ಬೆಂಗಳೂರು ನಗರದ ಚಾಮರಾಜಪೇಟೆ ಪ್ರದೇಶದ ಜನರಿಗೆ ಇದೊಂದು ಅತ್ಯಂತ ಶೋಚನೀಯ ದಿನವಾಗಿ ಮಾರ್ಪಟ್ಟಿತು. ಕ್ಷುಲ್ಲಕ ಕಾರಣಕ್ಕಾಗಿ ಅಲ್ಲಿ ಹಿಂದೂ ಮುಸಲ್ಮಾನರೊಳಗೆ ಗಲಭೆ ನಡೆದು ಜನತೆಗೆ ಅಪಾರ ಕಷ್ಟನಷ್ಟಗಳಾದವು. ಕಲ್ಲು ತೂರಾಟ, ಅಂಗಡಿ-ಮನೆಗಳಿಗೆ ಬೆಂಕಿ ಹಚ್ಚುವಿಕೆ, ಪೋಲೀಸರಿಂದ ಲಾಠಿ ಚಾರ್ಜು, ಗೋಲಿಬಾರು ಮುಂತಾದವು ನಡೆದು ಓರ್ವ ಮಹಿಳೆ ಪೋಲೀಸರ ಗುಂಡಿಗೆ ಆಹುತಿಯಾದಳು. ಅನೇಕರಿಗೆ ಗಾಯಗಳಾಗಿವೆ. ಆಸ್ತಿ-ಪಾಸ್ತಿಗೆ ತುಂಬಾ ನಷ್ಟವಾಗಿದೆ. ಈ ಗಲಭೆ ತಾರೀಖು ಒಂದು ಮತ್ತು ಎರಡರಂದು ನಡೆದು ಆಮೇಲೆ ಸ್ವಲ್ಪ ಶಾಂತಿಯಾಯಿತು. ಈಗ ಪರಿಸ್ಥಿತಿ ಹತೋಟಿಗೆ ಬಂದಿರುವುದು ಸ್ವಾಗತಾರ್ಹವಾಗಿದೆ.

ಈ ರೀತಿಯ ಕೋಮುವಾರು ಗಲಭೆಯು ನಡೆದಿರುವುದು ಅತ್ಯಂತ ಶೋಚನೀಯವಾಗಿದೆ. ಇದರಲ್ಲಿ ಆರೆಸ್ಸೆಸ್‌ನವರ ಕೈವಾಡವಿತ್ತೆಂಬುದರಲ್ಲಿ ಯಾವ ಸಂಶಯವೂ ಇಲ್ಲ. ಆದರೆ ಸರಕಾರವೂ ಈ ದುರ್ಘಟನೆಯನ್ನು ತಪ್ಪಿಸುವುದರಲ್ಲಿ ವಿಫಲಗೊಂಡಿತ್ತೆಂದು ನಾವು ವಿಷಾದದಿಂದ ಹೇಳಬೇಕಾಗಿದೆ.

ಸಂಪಾದಕೀಯ

ಈ ವಿವಾದಕ್ಕೆ ಸಂಬಂಧಿಸಿದ ಎಲ್ಲ ಅಂಶಗಳೂ ಸರಕಾರದ ಗಮನಕ್ಕೆ ಮೊದಲೇ ಬಂದಿದ್ದರೂ ಅದನ್ನ ಸಮರ್ಪಕವಾಗಿ ಬಗೆಹರಿಸಲು ಕ್ರಮ ತೆಗೆದುಕೊಳ್ಳದಿದ್ದುದರಿಂದ ಈ ಗಲಭೆಗೆ ಅವಕಾಶ ದೊರೆಯಿತೆಂದು ಹೇಳಲೇಬೇಕಾಗಿದೆ.

ಈ ಸಂದರ್ಭದಲ್ಲಿ ನಗರದ ಗಣ್ಯ ವಕ್ತಿಗಳು ಸೇರಿ ಶ್ರೀ ಕಡಿದಾಳ ಮಂಜಪ್ಪನವರ ಅಧ್ಯಕ್ಷತೆಯಲ್ಲಿ ಶಾಂತಿ ಸಮಿತಿಯನ್ನು ರಚಿಸಿ, ಅದರ ಸದಸ್ಯರು ಗಲಭೆ ಪ್ರದೇಶಗಳಿಗೆ ಹೋಗಿ ಜನರಿಗೆ ಧೈರ್ಯಕೊಟ್ಟು ಶಾಂತಿ ಸ್ಥಾಪನೆಗೆ ನಡೆಸಿದ ಪ್ರಯತ್ನವು ಸ್ವಾಗತಾರ್ಹವಾಗಿದೆ. ನಗರದ ಎಲ್ಲ ಪ್ರಜಾಸತ್ತಾತ್ಮಕ ಶಕ್ತಿಗಳೂ ಈ ಗಲಭೆಯಿಂದ ಪಾಠ ಕಲಿತು, ಇನ್ನು ಇಂತಹ ದುರಂತಗಳು ನಡೆಯದಂತೆ ಕ್ರಮವಹಿಸುವುದು ಅಗತ್ಯ. ಇದರಲ್ಲಿ ಕಾರ್ಮಿಕ ವರ್ಗದ ಪಾತ್ರ ಮಹತ್ವದ್ದಾಗಿದೆ. ಸಂಘಟಿತ ಕಾರ್ಮಿಕ ವರ್ಗ ಯಾವಾಗಲೂ ಎಚ್ಚರಿಕೆ ವಹಿಸಿ ಜಾತೀಯ ವೈಷಮ್ಯವನ್ನು ಬೆಳೆಸುವವರನ್ನು ದೂರಸರಿಸಿ ಕೋಮುವಾರು ಗಲಭೆಗಳು ನಡೆಯದಂತೆ ಮುಂಜಾಗ್ರತೆವಹಿಸಬೇಕೆಂದು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿಯು ಕರೆ ಕೊಡುತ್ತದೆ. ಈ ಗಲಭೆಯಲ್ಲಿ ನಷ್ಟ ಅನುಭವಿಸಿದ ನಾಗರಿಕರಿಗೆ ಸರಕಾರವು ಕೂಡಲೇ ಪರಿಹಾರವನ್ನು ಕೊಡಬೇಕೆಂದೂ ಮತ್ತು ಈ ವಿವಾದಕ್ಕೆ ಸಂಬಂಧಪಟ್ಟ ಪ್ರಶ್ನೆಯನ್ನು ಕೂಡಲೇ ಬಗೆಹರಿಸಬೇಕೆಂದೂ ನಾವು ಒತ್ತಾಯಪಡಿಸುತ್ತೇವೆ. ○

ಹೋರಾಟದಲ್ಲಿರುವ ಮೈಕೋ ಕಾರ್ಮಿಕರಿಗೆ

ಚಾರಿತ್ರಿಕ ಸೌಹಾರ್ದ ಬೆಂಬಲ

ಅಕ್ಟೋಬರ್ 5 ರಿಂದ ಹೋರಾಟದಲ್ಲಿರುವ ಬಹುರಾಷ್ಟ್ರೀಯ ಕಂಪೆನಿ ಮೈಕೋದ ಕಾರ್ಮಿಕರಿಗೆ ಸೌಹಾರ್ದ ಬೆಂಬಲ ಸೂಚಿಸಲು ನವೆಂಬರ್ ಏಳರಂದು ಬೆಂಗಳೂರು ನಗರದ ಕಬ್ಬನ್ ಪಾರ್ಕಿನಲ್ಲಿ ಸೇರಿದ ಬೃಹತ್ ಸಭೆಯು ಬೆಂಗಳೂರು ನಗರದ ಇತಿಹಾಸದಲ್ಲೆ ಒಂದು ಹೊಸ ಅನುಭವ. ಯಶವಂತಪುರ, ಕೃಷ್ಣರಾಜಪುರ, ಮೈಸೂರು ರಸ್ತೆ ಪ್ರದೇಶಗಳಿಂದ ಮತ್ತು ನಗರದ ಹೋಟೆಲು ಕಾರ್ಮಿಕರಿಂದ ಬೃಹತ್ ಮೆರವಣಿಗೆಗಳು, ಎಲ್ಲಾ ಕಾರಖಾನೆ ಮತ್ತು ಉದ್ಯಮ ಹಾಗೂ ಕಾರ್ಮಿಕ ಸಂಘಟನೆಗಳಿಂದ ಸಹಸ್ರಾರು ಮಂದಿ ಭಾಗವಹಿಸಿದ್ದ ಮೈಕೋ ಕಾರ್ಮಿಕರಿಗೆ ಸೌಹಾರ್ದ ಬೆಂಬಲ ಸೂಚಿಸುವ ಸಭೆಯಲ್ಲಿ ಸುಮಾರು ಹದಿನೈದು ಸಹಸ್ರ ಜನ ಸೇರಿದ್ದರು.

ಇನ್ನು ಒಂದು ವಾರದೊಳಗೆ ಸರಕಾರವು ಮಧ್ಯ ಪ್ರ ವೇ ಶ ಮಾ ಡಿ, ಹೋರಾಟದಲ್ಲಿರುವ ಮೈಕೋ ಕಾರ್ಮಿಕರಿಗೆ ನ್ಯಾಯ ಒದಗಿಸಿಕೊಟ್ಟಿಲ್ಲವಾದಲ್ಲಿ ನಗರದಲ್ಲಿ ಒಂದು ದಿನದ ಸಾರ್ವತ್ರಿಕ ಮುಷ್ಕರವನ್ನು ನಡೆಸಲು ನೆರೆದ ಸಹಸ್ರಾರು ಮಂದಿ ಕಾರ್ಮಿಕರು ಏಕಕಂಠದಿಂದ ಬೆಂಬಲ ಸೂಚಿಸಿದರು. ಮೈಕೋ ಮಾಲಕರು ಗೂಂಡಾಗಿರಿಯನ್ನು ನಿಲ್ಲಿಸಿ, ತಕ್ಷಣವೇ ಕಾರ್ಮಿಕರ ಬೇಡಿಕೆಗಳನ್ನು ಮನ್ನಿಸದಿದ್ದಲ್ಲಿ ಕೇವಲ ಬೆಂಗಳೂರು ನಗರಕ್ಕೆ ಮಾತ್ರ ಸೀಮಿತವಾಗಿರದೆ, ರಾಜ್ಯದಾದ್ಯಂತ ತೀವ್ರ ಚಳವಳಿಯನ್ನು ನಡೆಸಲಾಗುವುದು ಎಂದು ಬೇರೆಬೇರೆ ಕಾರ್ಮಿಕ ಸಂಘಟನೆಗಳ ಮುಂದಾಳುಗಳು ಎಚ್ಚರಿಕೆ ಇತ್ತರು.

ಕಬ್ಬನ್ ಪಾರ್ಕಿನಲ್ಲಿ ಸೇರಿದ್ದ ಸೌಹಾರ್ದ ಸಭೆಯ ಅಧ್ಯಕ್ಷತೆಯನ್ನು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ರಾಜ್ಯಸಮಿತಿ ಸೆಕ್ರೆಟಾರಿಯಟ್ ಸದಸ್ಯ ಮತ್ತು ಸಿ. ಐ. ಟಿ. ಯು. ಬೆಂಗಳೂರು ಸಮಿತಿಯ ಅಧ್ಯಕ್ಷರಾದ ಕಾಂ. ಎನ್. ಎಲ್. ಉಪಾಧ್ಯಾಯರು ವಹಿಸಿದ್ದರು. ಮೈಕೋ ಕಾರ್ಮಿಕರ ಹೋರಾಟ ಬೆಂಬಲಕ್ಕಾಗಿ ರಚಿಸಿದ ಸಮನ್ವಯ ಸಮಿತಿಯ ಸಂಚಾಲಕ ಕಾಂ. ಸುಬ್ರಹ್ಮಣ್ಯ ಅವರು ಸ್ವಾಗತ ಭಾಷಣ ಮಾಡಿದರು. ಎ. ಐ. ಟಿ. ಯು. ಸಿ. ಕಾರ್ಯದರ್ಶಿ ಕಾಂ. ಬಾಬುಮೇಥ್ಯೂ, ಎ. ಐ. ಟಿ. ಯು. ಸಿ. ಮುಖಂಡ ಕಾಂ. ಮಹಾದೇವನ್, ಮೈಕೋ ಕಾರ್ಮಿಕ ಸಂಘದ ಅಧ್ಯಕ್ಷ ಮತ್ತು ಸಿ. ಐ. ಟಿ. ಯು. ರಾಜ್ಯಸಮಿತಿ ಅಧ್ಯಕ್ಷ ಕಾಂ. ಸೂರ್ಯನಾರಾಯಣರಾವ್, ಸಿ.ಐ.ಟಿ.ಯು. ಬೆಂಗಳೂರು ಸಮಿತಿಯ ಕಾರ್ಯದರ್ಶಿ ಕಾಂ. ಟಿ. ಎಸ್. ಅನಂತರಾವ್, ಹಿಂದೂಸ್ತಾನ್ ವಿಮಾನ ಕಾರಖಾನೆಯ ಕಾರ್ಮಿಕ ಮುಂದಾಳುಗಳಾದ ಕಾಂ. ಕೃಷ್ಣಮೂರ್ತಿ ಮತ್ತು ಕಾಂ. ಮಣಿ, ಕರ್ನಾಟಕ ಪ್ರಾಂತ ರೈತಸಂಘದ ಅಧ್ಯಕ್ಷ ಕಾಂ. ಎಚ್. ಮುಗುವಾಳಪ್ಪ, ವಿಮಾ ನೌಕರರ ಸಂಘದ ಕಾಂ. ಕೆ. ವಿ. ಶ್ರೀನಿವಾಸ್, ಬ್ಯಾಂಕ್ ನೌಕರರ ಮುಂದಾಳು ಕಾಂ. ನಾಗೇಶ್, ಬಿ. ಇ. ಎಲ್. ಕಾ ರ ಖಾ ನೆ ಯ ಕಾ ರ್ಮಿ ಕ ಮುಂದಾಳುಗಳಾದ

[ಕಡೆಯ ಪುಟ ನೋಡಿ]

ಸೋವಿಯೆತ್ ಯೂನಿಯನ್ನಿಗೆ ಸಂದೇಶ

ಅಕ್ಟೋಬರ್ ಸ ಮಾ ಜ ವಾ ದಿ ಮಹಾಕ್ರಾಂತಿಯ ಅರವತ್ತೆರಡನೆ ವಾರ್ಷಿಕೋತ್ಸವದ ಸಂತಸದ ಸಂದರ್ಭದಲ್ಲಿ ಸೋವಿಯೆತ್ ಯೂನಿಯನ್ನಿನ ಕಮ್ಯುನಿಸ್ಟ್ ಪಕ್ಷ ಮತ್ತು ಜನತೆಗೆ ಭಾರತ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷವು ಶುಭ ಸಂದೇಶಗಳನ್ನು ಕಳುಹಿಸುತ್ತದೆ. ಸೋವಿಯೆತ್ ಯೂನಿಯನ್ ಕಮ್ಯುನಿಸ್ಟ್ ಪಕ್ಷ ಮತ್ತು ಮಹಾನ್ ಕ್ರಾಂತಿಕಾರಿ ಲೆನಿನ್ ಅವರ ನೇತೃತ್ವದಲ್ಲಿ ನಡೆದ ಅಕ್ಟೋಬರ್ ಮಹಾ ಕ್ರಾಂತಿಯು ಮಾನವ ಸಮಾಜದ ಚರಿತ್ರೆಯಲ್ಲಿ ಒಂದು ಹೊಸ ಅಧ್ಯಾಯವನ್ನು ಸ್ಥಾಪಿಸಿತು. ಕಾರ್ಮಿಕ ವರ್ಗದ ಸರ್ವಾಧಿಕಾರದ ಪ್ರಭುತ್ವವನ್ನು ಪ್ರಪ್ರಥಮವಾಗಿ ಸ್ಥಾಪಿಸಿ. ಮಾನವನು ಮಾನವನನ್ನು ಶೋಷಿಸುವುದನ್ನು ಕೊನೆಗಾಣಿಸಿ, ಕಾರ್ಮಿಕ ವರ್ಗದ ಕ್ರಾಂತಿ ಮತ್ತು ಸಮಾಜವಾದದ ಹೊಸ ಯುಗವನ್ನು ಸ್ಥಾಪಿಸಲಾಯಿತು. ನಿರಂಕುಶ ಜಾರನ ರಶಿಯಾದಲ್ಲಿ ತುಳಿತಕ್ಕೊಳಗಾದ ರಾಷ್ಟ್ರಗಳನ್ನು ವಿಮೋಚನೆಗೊಳಿಸಿ, ಸಮಾನತೆಯ ಆಧಾರದ ಮೇಲೆ ಸ ಮಾ ಜ ವಾ ದಿ ಸೋವಿಯೆತ್ ಒಕ್ಕೂಟವನ್ನು ರಚಿಸಲಾಯಿತು. ಅಕ್ಟೋಬರ್ ಕ್ರಾಂತಿಯಿಂದ ಸ್ಥಾಪಿತವಾದ ಶೋಷಣೆ ಮತ್ತು ತುಳಿತಗಳಿಲ್ಲದ ಸಮಾಜವಾದಿ ಪದ್ಧತಿಯು ಏಶಿಯಾ ಮತ್ತಿತರ ಭಾಗಗಳ ಜನತೆಗೆ ನವ ಸ್ಫೂರ್ತಿಯನ್ನಿತ್ತಿತು; ವಸಾಹತುಶಾಹಿ ವಿರುದ್ಧದ ಹೋರಾಟಕ್ಕೆ ಮಾರ್ಗದರ್ಶನವಾಯಿತು.

ತ್ಯಾಗ ಮತ್ತು ಕಷ್ಟಗಳನ್ನು ಅನುಭವಿಸುತ್ತಾ ಬೊಲ್ಶೆವಿಕ್ ಪಾರ್ಟಿಯ ನೇತೃತ್ವದಲ್ಲಿ ಸೋವಿಯೆತ್ ಜನತೆ ಸಾಮ್ರಾಜ್ಯಶಾಹಿ ಪಿತೂರಿಗಳನ್ನೆಲ್ಲಾ ನಾಶಮಾಡಿ, ಕೃಷಿಯನ್ನೇ ಅವಲಂಭಿಸಿಕೊಂಡಿದ್ದ ಬಹಳ ಹಿಂದುಳಿದಿದ್ದ ರಾಷ್ಟ್ರವನ್ನು ಘನ ಉದ್ಯಮದ ನೆಲೆಯನ್ನು ಸ್ಥಾಪಿಸುವುದರ ಮೂಲಕ ಆಧುನಿಕ ಕೃಷಿ ಮತ್ತು ಉದ್ಯಮಗಳ ರಾಷ್ಟ್ರವನ್ನಾಗಿ ಮಾಡಿತು. ಸೋವಿಯೆತ್ ರಾಷ್ಟ್ರವು ಯಶಸ್ವಿಯಾಗಿ ಸಾಮೂಹಿಕ ಕೃಷಿ ಮೂಲಕ ಅದನ್ನು ಆಧುನೀಕರಿಸಿತು. ಈ ರೀತಿ ಭದ್ರ ಸಮಾಜವಾದಿ ಆರ್ಥಿಕ ತಳಹದಿಯಿದ್ದುದರಿಂದಲೇ ಸೋವಿಯೆತ್ ಯೂನಿಯನ್ನಿನ ಕಮ್ಯುನಿಸ್ಟ್ ಪಕ್ಷಕ್ಕೆ ಸ್ಟಾಲಿನ್ ಅವರ ನೇತೃತ್ವದಲ್ಲಿ ಎರಡನೇ ಮಹಾಯುದ್ಧದಲ್ಲಿ ಫ್ಯಾಸಿಸಂ ಅನ್ನು ಸೋಲಿಸುವುದರಲ್ಲಿ ಮುಖ್ಯ ಪಾತ್ರ ವಹಿಸಿತು. ಫ್ಯಾಸಿಸಂ ವಿರುದ್ಧ ದೊರೆತ ಈ ಜಯವು ಚೀನಾದ ಮಹಾ ಕ್ರಾಂತಿ, ಪೂರ್ವ ಯೂರೋಪಿನ ಹಲವು ರಾಷ್ಟ್ರಗಳಲ್ಲಿ ಸಮಾಜವಾದಿ ಕ್ರಾಂತಿ, ವಿಯೆತ್ನಾಂ ಕೊರಿಯಾ ಮತ್ತು ಕ್ಯೂಬಾದ ವಿಮೋಚನೆ–ಇವುಗಳ ವಿಜಯಕ್ಕೆ ಎಡೆ ಮಾಡಿತು. ಜಗತ್ತಿನಾದ್ಯಂತ ಸಾಮ್ರಾಜ್ಯಶಾಹಿ ವಿರುದ್ಧದ ಹೋರಾಟಕ್ಕೆ ಅಕ್ಟೋಬರ್ ಕ್ರಾಂತಿಯು ಸಹಾಯ ಮಾಡಿತು. ಈ ಎಲ್ಲ ಘಟನೆಗಳು ಶಾಂತಿ, ಸ್ವಾತಂತ್ರ್ಯ, ಪ್ರಜಾಪ್ರಭುತ್ವ ಮತ್ತು ಸಮಾಜವಾದಗಳಿಗೆ ಅನುಕೂಲವಾಗುವಂತೆ ಜಗತ್ತಿನಾದ್ಯಂತ ಶಕ್ತಿ ಸಂಬಂಧಗಳನ್ನು ಬದಲಾಯಿಸಿದುವು.

ಸೋವಿಯೆತ್ ಯೂ ನಿ ಯ ನ್ ಮತ್ತು ಇತರ ಸಮಾಜವಾದಿ ರಾಷ್ಟ್ರಗಳು ಆರ್ಥಿಕ, ರಾಜಕೀಯ, ಸಾಮಾಜಿಕ, ಸಾಂಸ್ಕೃತಿಕ, ರಕ್ಷಣೆ ಮೊದಲಾದ ರಂಗಗಳಲ್ಲಿ ಸಾ ಧಿ ಸಿ ರು ವ ಅದ್ಭುತ ಪ್ರಗತಿಯು ಸಮಾಜವಾದಿ ಪದ್ಧತಿಯು ಬಂಡವಾಳಶಾಹಿ ಪ ದ್ಧ ತಿ ಗಿಂ ತ ಎಷ್ಟೆಷ್ಟೋ ಉತ್ತಮವೆಂಬುದನ್ನು ತೋರಿಸಿಕೊಟ್ಟಿದೆ. ಜಗತ್ತಿನಾದ್ಯಂತ ಕ್ರಾಂತಿಕಾರಿ ಹೋರಾಟಗಳಿಗೆ ತುಂಬಾ ಸಹಾಯ ದೊರೆತಿದೆ.

ಆದರೆ, ಸಮಾಜವಾದಿ ರಾಷ್ಟ್ರ ಮತ್ತು ಅಂತರರಾಷ್ಟ್ರೀಯ ಕಮ್ಯುನಿಸ್ಟ್ ಚಳವಳಿಯಲ್ಲಿ ಬೆಳೆದು ಬಂದ ಭಿನ್ನಾಭಿಪ್ರಾಯಗಳಿಂದಲಾಗಿ ಸೋವಿಯೆತ್ ಯೂನಿಯನ್ ಮತ್ತು ಸಮಾಜವಾದಿ ರಾಷ್ಟ್ರಗಳಿಗೆ ಮಾತ್ರವೇ ಅಲ್ಲ, ಜಗತ್ತಿನ ಎಲ್ಲಾ ಪ್ರಗತಿಶೀಲ ಶಕ್ತಿಗಳಿಗೂ ಸೇರಿ ಎಷ್ಟು ಪ್ರಯೋಜನ

[ಕಡೆಯ ಪುಟ ನೋಡಿ]

ಪ್ಲೈವುಡ್ ವರ್ಕರ್ಸ್ ಯೂನಿಯನ್ನಿನ ವಾರ್ಷಿಕ ಮಹಾಸಭೆ

ತಾರೀಕು 28-10-79 ರಂದು ಉಡುಪಿ ತಾಲ್ಲೂಕಿನ ಮಾಬುಕಳ ಶಾಲಾ ವಠಾರದಲ್ಲಿ ಸೌತ್‌ಕೆನರಾ ಡಿಸ್ಟ್ರಿಕ್ಟ್ ಪ್ಲೈವುಡ್ ವರ್ಕರ್ಸ್ ಯೂನಿಯನ್ನಿನ 5ನೇ ವಾರ್ಷಿಕ ಮಹಾಸಭೆಯು ಸಂಘದ ಅಧ್ಯಕ್ಷರಾದ ಕಾಂ. ಕೆ. ಮೂಸಬ್ಬನವರ ಅಧ್ಯಕ್ಷತೆಯಲ್ಲಿ ಜರುಗಿತು. ಪ್ರಾರಂಭದಲ್ಲಿ ಕಾಂ. ವಿಠಲ್‌ನವರು ಸಭೆಗೆ ಹಾಜರಿದ್ದವರನ್ನು ಸ್ವಾಗತಿಸಿದರು. ಆನಂತರ ಗತ ವರ್ಷದ ಸಂಘದ ಲೆಕ್ಕಪತ್ರ ಹಾಗೂ ಚಟುವಟಿಕಾ ವರದಿಯನ್ನು ಸಂಘದ ಕಾರ್ಯದರ್ಶಿಯವರಾದ ಕಾಂ. ಕೆ. ಶಂಕರ್‌ರವರು ಓದಿ ಹೇಳಿದರು.

ವರದಿಯ ಮೇಲೆ ಕಾಂ. ವಿಠಲ್, ವಿ. ಜೆ. ಜೋಯಿ, ಬಿ ವಿಷ್ಣುಮೂರ್ತಿ ಮತ್ತು ಸಿ. ನಾರಾಯಣನವರು ಮಾತನಾಡಿದರು. ಬಳಿಕ ಸಭೆಯಲ್ಲಿ ಮುಖ್ಯ 4 ಠರಾವುಗಳನ್ನು ಮಂಡಿಸಲಾಯಿತು. ಅವುಗಳು ಮುಖ್ಯವಾಗಿ: ಬೆಂಗಳೂರಿನ ಮೈಕೋ ಕಾರ್ಮಿಕರ ಮುಷ್ಕರಕ್ಕೆ ಬೆಂಬಲ ಸೂಚಿಸಿ, ಸರಕಾರ ಕಾರ್ಮಿಕರ ಮೇಲಿನ ದಬ್ಬಾಳಿಕಾ ಕ್ರಮವನ್ನು ಕೈಬಿಟ್ಟು ಕೇಳಿಕೆಗಳನ್ನು ಬಗೆಹರಿಸಲು ಮುಂದಾಗಬೇಕೆಂದೂ, ದಾಂಡೇಲಿ ಎಲೆಕ್ಟ್ರೋ ಮೆಟಲರ್ಜಿಕಲ್ ಕಾರ್ಮಿಕರ ಮೇಲೆ ಇರುವ ಮೊಕದ್ದಮೆಗಳನ್ನು ವಾಪಾಸು ತೆಗೆದುಕೊಂಡು, ಅಕ್ರಮ ಬೀಗಮುದ್ರೆಯನ್ನು ಕೂಡಲೇ ತೆಗೆದು ಎಲ್ಲಾ ಕೆಲಸಗಾರರನ್ನು ವಾಪಾಸು ಕೆಲಸಕ್ಕೆ ತೆಗೆದುಕೊಳ್ಳುವಂತೆ ಸರಕಾರವನ್ನು ಒತ್ತಾಯಿಸುವ, ಪ್ಲೈವುಡ್ ಕಾರ್ಮಿಕರಿಗೆ ನಿಗಧಿಯಾದ ಕನಿಷ್ಠ ಕೂಲಿಗೆ ಸಂಬಂಧಪಟ್ಟು ಮಾಲಕರು ಹೈಕೋರ್ಟಿನಿಂದ ತಂದ ತಡೆಯಾಜ್ಞೆಯನ್ನು ತೆಗೆಯಲು ಸರಕಾರವು ಕ್ರಮವಹಿಸಬೇಕೆಂದೂ ಹಾಗೂ ಕೋಮುವಾದಿ ಮತ್ತು ಸರ್ವಾಧಿಕಾರಿ ಶಕ್ತಿಗಳನ್ನು ಸೋಲಿಸಲು ಕಾರ್ಮಿಕರು ಮುಂಬರುವ ಚುನಾವಣೆಯಲ್ಲಿ ಸರ್ವ ವಿಧದ ಬೆಂಬಲ ನೀಡಬೇಕೆಂಬ ಇವೇ ಮೊದಲಾದ ನಿರ್ಣಯಗಳನ್ನು ಸಭೆಯಲ್ಲಿ ಅಂಗೀಕರಿಸಲಾಯಿತು.

ಸಭೆಯ ಅಧ್ಯಕ್ಷತೆ ವಹಿಸಿದ ಕಾಂ. ಕೆ. ಮೂಸಬ್ಬನವರು ಪ್ಲೈವುಡ್ ಕಾರ್ಮಿಕರ ಹೋರಾಟವು ಬರೇ ಆರ್ಥಿಕ ಕೇಳಿಕೆಗಳಿಗಾಗಿ ಸೀಮಿತಗೊಳ್ಳದೆ ರಾಜಕೀಯವಾಗಿ ಬೆಳೆದು ಬರುವುದರ ಬಗ್ಗೆ ಸಂತೋಷ ವ್ಯಕ್ತಪಡಿಸುತ್ತಾ, ಸಿ. ಐ. ಟಿ. ಯು. ವಿನ ಧ್ಯೇಯ ಧೋರಣೆ ಮತ್ತು ಮುಂದೆ ಬರುವ ಹೋರಾಟ ಕಾರ್ಯಕ್ರಮಗಳ ಬಗ್ಗೆ ವಿವರಣೆ ನೀಡಿದರು.

ತಾ. 21-11-1979 ರಂದು ಕಾರ್ಮಿಕರ ಮುಖ್ಯ ಕೇಳಿಕೆಗಳನ್ನು ಒತ್ತಾಯಿಸಿ ಜಿಲ್ಲಾ ಸಿ. ಐ. ಟಿ. ಯು. ವಿನ ನೇತೃತ್ವದಲ್ಲಿ ಜಿಲ್ಲಾ ಕೇಂದ್ರವಾದ ಮಂಗಳೂರಿನಲ್ಲಿ ನಡೆಯುವ ಬೃಹತ್ ಮತಪ್ರದರ್ಶನವನ್ನು ಯಶಸ್ವಿಗೊಳಿಸಲು ಸಭೆಯಲ್ಲಿ ನಿರ್ಧಾರ ಕೈಗೊಳ್ಳಲಾಯಿತು.

14 ಸದಸ್ಯರಿರುವ ಸಂಘದ ಜಿಲ್ಲಾ ಕಾರ್ಯಕಾರಿ ಸಮಿತಿಯನ್ನು ರಚಿಸಿ ಪದಾಧಿಕಾರಿಗಳನ್ನು ಆಯ್ಕೆಮಾಡಲಾಯಿತು. ಕಾಂ. ಕೆ. ಮೂಸಬ್ಬನವರನ್ನು ಅಧ್ಯಕ್ಷರನ್ನಾಗಿ, ಬಿ. ವಿಷ್ಣುಮೂರ್ತಿ ಮತ್ತು ಕೆ. ಸೂರ್ಯನಾರಾಯಣ ಭಟ್‌ರವರನ್ನು ಉಪಾಧ್ಯಕ್ಷರುಗಳನ್ನಾಗಿಯೂ, ಕಾಂ. ಕೆ. ಶಂಕರ್‌ರವರನ್ನು ಪ್ರಧಾನ ಕಾರ್ಯದರ್ಶಿಯವರನ್ನಾಗಿ, ವಿಠಲ್ ಮತ್ತು ವಿ. ಜೆ. ಜೋಯಿಯವರನ್ನು ಜೊತೆ ಕಾರ್ಯದರ್ಶಿಯವರನ್ನಾಗಿಯೂ ಹಾಗೂ ಸಿ. ನಾರಾಯಣರವರನ್ನು ಕೋಶಾಧಿಕಾರಿಯನ್ನಾಗಿಯೂ ಆರಿಸಲಾಯಿತು.

○

ಕೋಲಾರ ತಾಲ್ಲೂಕು ರೈತಸಂಘದ ಸಭೆ

1-11-79 ರಲ್ಲಿ ಕೋಲಾರ ತಾಲ್ಲೂಕು ರೈತ ಕಾರ್ಯಕರ್ತರು ಸಂಘದ ಆಫೀಸಿನಲ್ಲಿ ಕಾಂ. ಆರ್. ವೆಂಕಟರಾಮಯ್ಯನವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ತಾಲ್ಲೂಕು ರೈತರ ಸಮಸ್ಯೆಗಳ ಬಗ್ಗೆ ಚರ್ಚೆ ನಡೆಸಿತು.

ಈಗ ರೈತರನ್ನು ಕಾಡಿಸುತ್ತಿರುವ ಮುಖ್ಯ ಬೇಡಿಕೆಗಳ ಬಗ್ಗೆ ಹೋರಾಟ ನಡೆಸಲು ತಾಲ್ಲೂಕು ರೈತಸಂಘದ ಕಮಿಟಿಯನ್ನು ಆರಿಸಲಾಯಿತು.

ಕಾಂ. ಬಿ. ಕೃಷ್ಣಪ್ಪ ಅಧ್ಯಕ್ಷರು. ಕಾಂ. ಪೆದ್ದವೆಂಕಟಗಿರಿ, ಕಾಂ. ವೀರಭದ್ರಯ್ಯ, ಕಾಂ. ಬೈರಪ್ಪ ಉಪಾಧ್ಯಕ್ಷರುಗಳು. ಕಾಂ. ಶಿವರಾಮೇಗೌಡ, ಕಾಂ. ಎಂ. ಶೀನಪ್ಪ, ಕಾಂ. ಎನ್. ನಲ್ಲೇಗೌಡ, ಕಾಂ. ಎಂ. ಪಿಳ್ಳಪ್ಪ ಕಾರ್ಯದರ್ಶಿಗಳು. ಕಾಂ. ವಿ. ಹನುಮಪ್ಪ ಖಜಾಂಚಿ.

ಕಾರ್ಯಕಾರಿ ಸಮಿತಿ

ಹುತ್ತೂರು ಹೋಬಳಿ :

ಶಿವಪ್ಪ, ಎಸ್. ಆರ್ ಬೈಪಣ್ಣ. ಎಸ್ ಕೃಷ್ಣಪ್ಪ, ರಾಜನಾರಾಯಣ್, ವೀರಪ್ಪ.

ವಡುಗೂರು ಹೋಬಳಿ ;

ಎಸ್. ನಾರಾಯಣ, ವೀರಪ್ಪ, ಎ. ವೆಂಕಟರಾಮಯ್ಯ.

ವೇಮಗಲ್ ಹೋಬಳಿ :

ಎಂ. ಚಲ್ಲಪ್ಪ.

ನರಸಪುರ ಹೋಬಳಿ :

ನಾರಾಯಣಪ್ಪ.

ಹೋಳೂರು ಹೋಬಳಿ :

ಎಸ್. ಶಂಕರಪ್ಪ, ವೆಂಕಟರಾಮಪ್ಪ, ರಾಮರೆಡ್ಡಿ.

ಸುಗಟೂರು ಹೋಬಳಿ :

ಶ್ರೀನಿವಾಸಯ್ಯ.

ರೈತರ ಹಲವಾರು ಪ್ರಮುಖ ಬೇಡಿಕೆಗಳನ್ನು ಮುಂದಿಟ್ಟು ತಾ. 15-11-79 ರಂದು ಕೋಲಾರ ನಗರದಲ್ಲಿ ರೈತ, ಕಾರ್ಮಿಕರ ಬೃಹತ್ ಪ್ರದರ್ಶನ, ಜಿಲ್ಲಾಧಿಕಾರಿಗಳಿಗೆ ಮನವಿ ಅರ್ಪಣೆ ಹಾಗೂ ಬಹಿರಂಗ ಸಭೆ ನಡೆಸಲು ಸಭೆ ತೀರ್ಮಾನಿಸಿತು. ○

ಯುಗಪುರುಷ ಸ್ಟಾಲಿನ್‌ರವರ ಶತಮಾನೋತ್ಸವ ದಿನಾಚರಣೆ

ಭಾರತ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಬೆಂಗಳೂರು ಶ್ರೀರಾಮಪುರ ಶಾಖೆಯ ಆಶ್ರಯದಲ್ಲಿ ಯುಗಪುರುಷ ಸ್ಟಾಲಿನ್‌ರವರ ಶತಮಾನೋತ್ಸವ ಜನ್ಮದಿನಾಚರಣೆಯನ್ನು ದಿನಾಂಕ 26-10-79 ರಂದು ಸಾಯಿಬಾಬ ನಗರದ ಕಲ್ಯಾಣ ಮಂಟಪದಲ್ಲಿ ಆಚರಿಸಲಾಯಿತು. ಪ್ರಾರಂಭದಲ್ಲಿ ಕಾಂ. ಪಿ. ಕೆ. ಸುಬ್ರಮಣಿಯವರು ಸ್ವಾಗತ ಭಾಷಣ ಮಾಡಿದರು. ಸಭೆಯ ಅಧ್ಯಕ್ಷತೆಯನ್ನು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಹಿರಿಯ ಧುರೀಣ ಕಾಂ. ಎನ್. ಎಲ್. ಉಪಾಧ್ಯಾಯರವರು ವಹಿಸಿದರು. ಮುಖ್ಯ ಅತಿಥಿಯಾಗಿ ಪಕ್ಷದ ರಾಜ್ಯಸಮಿತಿಯ ಕಾರ್ಯದರ್ಶಿಗಳಾದ ಕಾಂ. ಎಂ. ಕೆ. ಭಟ್‌ರವರು ಬಂದಿದ್ದರು. ರಾಜ್ಯ ಸಿ. ಐ. ಟಿ. ಯು. ವಿನ ಕಾರ್ಯದರ್ಶಿ ವಿ. ಜೆ. ಕೆ. ನಾಯರ್‌ರವರು ಭಾಗವಹಿಸಿದ್ದರು. ಕಾಂ. ಎಂ. ಕೆ. ಭಟ್‌ರವರು ಮಾತನಾಡುತ್ತಾ, ರಷ್ಯದ ಕ್ರಾಂತಿಗಾಗಿ ಸ್ಟಾಲಿನ್‌ರವರು ಮಾಡಿದ ತ್ಯಾಗವನ್ನು ಹೇಳುತ್ತಾ, ಲೆನಿನ್‌ರವರು ಸ್ಥಾಪಿಸಿದ ಸಮಾಜವಾದಿ ಕ್ರಾಂತಿಯನ್ನು ಅತ್ಯಂತ ಜವಾಬ್ದಾರಿಯಿಂದ ಮುಂದುವರಿಸಿಕೊಂಡು ಹೋಗಿ ಯಶಸ್ವಿಯಾದರು. ಬಂಡವಾಳಶಾಹಿ ಪದ್ಧತಿಯ ವಿರುದ್ಧ ಹೋರಾಡಿ ಜಯಗಳಿಸಿದ ಮಹಾಪುರುಷರೆಂದು ಹೇಳಿದರು. ನಾವು ಜನತೆಗೆ ಅವರ ಆದರ್ಶಗಳನ್ನು ಮುಟ್ಟಿಸುವುದು ಅತ್ಯಾವಶ್ಯಕವೆಂದು ಹೇಳಿ ಸ್ಟಾಲಿನ್‌ರವರು ಯಾವುದಕ್ಕಾಗಿ ಹೋರಾಡಿದರೋ ಆ ಹೋರಾಟವನ್ನು ನಾವು ಮುಂದುವರಿಸಿಕೊಂಡು ಹೋಗಬೇಕೆಂದು ಹೇಳಿದರು.

ವಿ. ಜೆ. ಕೆ. ನಾಯರ್‌ರವರು ತಮ್ಮ ಭಾಷಣದಲ್ಲಿ ಸ್ಟಾಲಿನ್‌ರವರನ್ನು ಒಬ್ಬ ಸರ್ವಾಧಿಕಾರಿಯೆಂದು ಒಂದು ವರ್ಗದವರು ಅವರನ್ನು ಟೀಕಿಸುವುದರ ಬಗ್ಗೆ ಉತ್ತರಿಸುತ್ತಾ, ದುಡಿಯುವ ವರ್ಗದ ಜನತೆಗೆ ಆಗುವ ಅನ್ಯಾಯದ ವಿರುದ್ಧ ಪ್ರತಿಭಟಿಸುತ್ತಿದ್ದುದರಿಂದ ಬಂಡವಾಳಶಾಹಿ ವರ್ಗದವರು ಅವರ ವಿರುದ್ಧ ಮಾಡಿದ ಅಪಪ್ರಚಾರವೆಂದರು. ಪ್ರತಿಯೊಂದು ಆಡಳಿತದಲ್ಲೂ ಸರ್ವಾಧಿಕಾರವಿರುತ್ತದೆ. ಆದರೆ ಸ್ಟಾಲಿನ್‌ರವರ ಸರ್ವಾಧಿಕಾರ ದುಡಿಯುವ ವರ್ಗದ ಸರ್ವಾಧಿಕಾರವಾಗಿ ಬಂಡವಾಳಗಾರರ ವಿರುದ್ಧವಾಗಿತ್ತು ಎಂದು ಹೇಳಿದರು. ಕಾಂ. ಎನ್. ಎಲ್. ಉಪಾಧ್ಯಾಯರವರು ಅಂತರಾಷ್ಟ್ರೀಯ ಕಮ್ಯುನಿಸ್ಟ್ ಪಕ್ಷಕ್ಕೆ, ಕಾಂ. ಸ್ಟಾಲಿನ್‌ರವರು ಮಾಡಿದ ಕೊಡುಗೆಯನ್ನು ಸ್ಮರಿಸಿದರು. ರೈತ-ಕಾರ್ಮಿಕರ ಸಂಘಟನೆಯನ್ನು ಕಟ್ಟಿ ಬಂಡವಾಳಶಾಹಿ ಸಮಾಜದ ವಿರುದ್ಧ ಹೋರಾಡಿ ಸಮಾಜವಾದಿ ರಾಷ್ಟ್ರವನ್ನು ಸ್ಥಾಪನೆ ಮಾಡಲು ತಮ್ಮ ಜೀವನವನ್ನೇ ಮುಡಿಪಾಗಿಟ್ಟ ಮಹಾನ್ ವ್ಯಕ್ತಿಯೆಂದರು. ರಷ್ಯದಲ್ಲಿ ಸಮಾಜವಾದಿ ಸರ್ಕಾರ ಸ್ಥಾಪನೆಯಾದನಂತರ ಇತರ ಬಂಡವಾಳಶಾಹಿ ರಾಷ್ಟ್ರಗಳು ರಷ್ಯವನ್ನು ಬಹಿಷ್ಕರಿಸಿದ ಸಂದರ್ಭವನ್ನು ವಿವರಿಸಿದರು. ಆರ್ಥಿಕವಾಗಿ ಹಿಂದುಳಿದಿದ್ದ ರಾಷ್ಟ್ರಕ್ಕೆ ಯೋಜನಬದ್ಧ ಆರ್ಥಿಕ

[ಕಡೆಯ ಪುಟ ನೋಡಿ]

ಚಿನ್ನದಗಣಿ ಕಾರ್ಮಿಕರಿಗೆ ಬೋನಸ್

ಕೋಲಾರ ಚಿನ್ನದ ಗಣಿಯ ಸುಮಾರು 4,400 ಕಾರ್ಮಿಕರು ಆರು ಲಕ್ಷ ರೂಪಾಯಿಗಳನ್ನು 1977, 78 ಮತ್ತು 79ನೇ ಇಸವಿಯ ಇನ್‌ಸೆಂಟೀವ್ ಬೋನಸ್ ಆಗಿ ಪಡೆಯಲಿದ್ದಾರೆ. ಈ ಹೊಸ ಇನ್‌ಸೆಂಟೀವ್ ಬೋನಸ್ ಯೋಜನೆ 20-11-79 ರಿಂದ ಜಾರಿಗೆ ಬರಲಿದೆ. ಹೊಸ ಯೋಜನೆ 1957ರಿಂದ ಜಾರಿಯಲ್ಲಿದ್ದ ಹಳೆ ಒಪ್ಪಂದದ ಬದಲಿಗೆ ಬರಲಿದೆ.

ಇನ್‌ಸೆಂಟೀವ್ ಬೋನಸ್ ಕೊಡುವ ಬಗ್ಗೆ ಭಾರತ್ ಗೋಲ್ಡ್ ಮೈನ್ಸ್‌ನ ಆಡಳಿತ ಮಂಡಳಿ ಹಾಗೂ ಮೈಸೂರು ಮೈನ್ಸ್ ಕಾರ್ಮಿಕರ ಸಂಘದ ನಡುವೆ ಆದ ಒಪ್ಪಂದದಲ್ಲಿ, ಕಾಂ. ಎ. ಕಣ್ಣನ್ ಅಧ್ಯಕ್ಷರು, ಕಾಂ. ಸವರಿದಾಸ್ ಉಪಾಧ್ಯಕ್ಷರು ಹಾಗೂ ಕಾಂ. ಟಿ. ಎಸ್. ಮಣಿ ಕಾರ್ಯದರ್ಶಿ ಇವರುಗಳು ಕಾರ್ಮಿಕರ ಪರವಾಗಿ ಒಪ್ಪಂದಕ್ಕೆ ಸಹಿ ಹಾಕಿದರು.

●

ಮುಷ್ಕರ ಮುಂದುವರಿಕೆ

ಉ. ಕ. ಜಿಲ್ಲೆಯ ದಾಂಡೇಲಿ ಫೆರ್ರೋ ಅಲ್ಲಾಯ್ಸ್ ಕಂಪೆನಿಯು ತಾ. 29-10-79 ರಂದು ಚಾಲುಮಾಡುವುದಾಗಿ ಪತ್ರಿಕೆಗಳಲ್ಲಿ ಪ್ರಕಟವಾಗಿತ್ತು. ಅದರ ಪ್ರಕಾರ ತಾ. 30-10-79 ರಂದು ಬೆಳಿಗ್ಗೆ 8 ಘಂಟೆಗೆ ಫ್ಯಾಕ್ಟರಿ ಮುಖ್ಯ ಗೇಟಿನಲ್ಲಿ ಎಲ್ಲ ಕಾರ್ಮಿಕ ಬಂಧುಗಳು ಕೆಲಸಕ್ಕಾಗಿ ಹಾಜರಾದರು. ಆದರೆ ಮ್ಯಾನೇಜುಮೆಂಟಿನವರು ಒಟ್ಟು 153 ಜನರಿಗೆ ಲೇ ಆಫ್ ಮಾಡುವುದಾಗಿಯೂ, 183 ಜನರನ್ನು ಕೆಲಸಕ್ಕೆ ತೆಗೆದುಕೊಳ್ಳುವುದಾಗಿಯೂ ತಮ್ಮ ಏಕಪಕ್ಷೀಯ ತೀರ್ಮಾನವನ್ನು ತಿಳಿಸಿದರು. ಈ ತೀರ್ಮಾನಕ್ಕೆ ಕಾರ್ಮಿಕ ಬಂಧುಗಳು ವಿರೋಧಿಸಿದರು. ಮತ್ತು ಎಲ್ಲಾ ಕಾರ್ಮಿಕರನ್ನು ಸಹ ಕೆಲಸಕ್ಕೆ ತೆಗೆದುಕೊಳ್ಳಬೇಕೆಂದು ಒತ್ತಾಯಿಸಿದರು. ಅಲ್ಲದೆ ದಾಂಡೇಲಿ ನಾಗರಿಕ ಸಮಿತಿಯು ಸಹ ಈ ಬಗ್ಗೆ ಒತ್ತಾಯ ತಂದರು. ಆದರೆ ಮ್ಯಾನೇಜುಮೆಂಟು ಇದಕ್ಕೆ ಒಪ್ಪಲಿಲ್ಲವಾದ್ದರಿಂದ ಯಥಾ ಪ್ರಕಾರ ಬೀಗಮುದ್ರೆ ಮುಂದುವರೆದಿದೆ.

○

ಸಂತಾಪ

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿಯ ಹಿತೈಷಿ ಮತ್ತು ಐಕ್ಯರಂಗ ಪತ್ರಿಕೆಯ ಓದುಗರೂ ಆಗಿದ್ದ ಮಂಗಳೂರು, ಅತ್ತಾವರ ಗ್ರಾಮದಲ್ಲಿ ಜನಪ್ರಿಯರಾಗಿದ್ದ ಶ್ರೀ ಅತ್ತಾವರ ಗಣೇಶನವರು ತಾ. 24-10-79 ರಂದು ನಿಧನರಾದರು. ಶ್ರೀ ಗಣೇಶನವರ ನಿಧನಕ್ಕೆ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿ ಅತ್ತಾವರ ಶಾಖೆಯು ಸಂತಾಪ ಸೂಚಿಸುವುದರೊಂದಿಗೆ ಮೃತರ ಕುಟುಂಬದ ದುಃಖದಲ್ಲಿ ಪಾಲ್ಗೊಳ್ಳುತ್ತದೆ.

ಲಕ್ಕಿಡಿಪ್

ನೇತಾಜಿ ಗೇಮ್ಸ್ ಕ್ಲಬ್ ತೊಕ್ಕೋಟು ಇದರ ಸಹಾಯಾರ್ಥವಾಗಿ ತೆಗೆದ ಲಕ್ಕಿಡಿಪ್ ಫಲಿತಾಂಶ.

I. 753. II. 294. III. 559

ಬಹುಮಾನಗಳನ್ನು 15 ದಿನಗಳೊಳಗೆ ತೆಗೆದುಕೊಂಡು ಹೋಗಬೇಕಾಗಿ ವಿನಂತಿ.

ಕಾರ್ಯದರ್ಶಿ

ಸಪ್ಟೆಂಬರ್ 14 ಚಿರಾಯುವಾಗಲಿ!

—ಆರ್. ಚಂದ್ರ

ಸೆಪ್ಟೆಂಬರ್ 14, 1979 ರಂದು ಸ್ವತಂತ್ರ ಭಾರತದ ಸಂಘಟಿತ ಕಾರ್ಮಿಕರ ಹೋರಾಟದಲ್ಲಿ ಒಂದು ಹೊಸ ಅಧ್ಯಾಯ ಪ್ರಾರಂಭವಾಯಿತು. ಆ ದಿನ ಮೊತ್ತಮೊದಲು 189 ಸಾರ್ವಜನಿಕ ಕ್ಷೇತ್ರದ ಸಂಸ್ಥೆಗಳ ಸುಮಾರು 20 ಲಕ್ಷ ನೌಕರರ ಸಾಮಾನ್ಯ ಬೇಡಿಕೆಗಳನ್ನು ಮುಂದಿಟ್ಟುಕೊಂಡು ದೇಶಾದ್ಯಂತ ಪ್ರತಿಭಟನಾ ಮುಷ್ಕರವನ್ನು ನಡೆಸಲಾಯಿತು. 1977 ರಿಂದ ನವದೆಹಲಿ, ಹೈದರಾಬಾದ್, ಮತ್ತು ಬೆಂಗಳೂರು ನಗರಗಳಲ್ಲಿ ಅಖಿಲ ಭಾರತ ಮಟ್ಟದಲ್ಲಿಯೂ ಮತ್ತಿತರ ಪ್ರಮುಖ ನಗರಗಳಲ್ಲಿ ಪ್ರಾದೇಶಿಕ ಮಟ್ಟದಲ್ಲಿಯೂ ನಡೆದ ಸಾರ್ವಜನಿಕ ಕ್ಷೇತ್ರದ ಕಾರ್ಮಿಕ ಸಂಘಗಳ ಸಂಯುಕ್ತ ಸಮಾವೇಶಗಳಲ್ಲಿ ನಡೆಸಿದ ವಿಚಾರ ವಿನಿಮಯಗಳಿಂದಲೂ ಸಾಧಿಸಿದ ಐಕ್ಯಮತ್ಯದಿಂದಲೂ ಮತ್ತು ರೂಪಿಸಿದ ಪರಿಣಾಮಕಾರಿಯಾದ ಕಾರ್ಯಕ್ರಮಗಳಿಂದಲೂ ಕಟ್ಟಕಡೆಗೆ ದೇಶಾದ್ಯಂತ ತಾ. 14 ಸಪ್ಟೆಂಬರ್‌ನಲ್ಲಿ ಪ್ರತಿಭಟನಾ ಮುಷ್ಕರವನ್ನು ಯಶಸ್ವಿಯಾಗಿ ನಡೆಸಲು ಸಾಧ್ಯವಾಯಿತು. ಈ ಮುಷ್ಕರದ ಪೂರ್ವಭಾವಿಯಾಗಿ ಆಗಸ್ಟ್ 13 ರಂದು 'ಸಾರ್ವಜನಿಕ ಕ್ಷೇತ್ರದ ಕಾರ್ಮಿಕರ ಬೇಡಿಕೆಗಳ ದಿನ'ವನ್ನಾಚರಿಸಲಾಯಿತು. ತಾ. 29 ಆಗಸ್ಟ್ ರಂದು ದೇಶಾದ್ಯಂತ ಸಾರ್ವಜನಿಕ ಕ್ಷೇತ್ರದ ವಿವಿಧ ಕಾರ್ಮಿಕ ಸಂಘಗಳು ಸಂಬಂಧಪಟ್ಟ ತಮ್ಮ ಆಡಳಿತಗಾರರಿಗೆ ಮುಷ್ಕರ ನೋಟೀಸುಗಳನ್ನು ಸಲ್ಲಿಸಿ ಭಾರೀ ಮತಪ್ರದರ್ಶನಗಳ ಮೂಲಕ ತಮ್ಮ ಹೋರಾಟವನ್ನು ಯಶಸ್ವಿಗೊಳಿಸಲು ದೃಢ ನಿರ್ಧಾರವನ್ನು ವ್ಯಕ್ತಪಡಿಸಿದವು. ಈ ಮಧ್ಯೆ ಕೇಂದ್ರ ಅರ್ಥ ಮಂತ್ರಿ ಶ್ರೀ ಎಚ್. ಎನ್. ಬಹುಗುಣ ಅವರ ಮಧ್ಯಸ್ಥಿಕೆಯಾಗಲೀ ಔಪಚಾರಿಕ ಆಶ್ವಾಸನೆಗಳಾಗಲೀ ಕಾರ್ಮಿಕರನ್ನು ವಿಚಲಿತಗೊಳಿಸಲಿಲ್ಲ. ಜೂನ್ 26, 1978 ರಂದು ಆಗಿನ ಕೇಂದ್ರ ಅರ್ಥ ಮಂತ್ರಿ ಶ್ರೀ ಎಚ್. ಎಮ್. ಪಾಟೀಲರ ಆಶ್ವಾಸನೆಗಳು ಮುಂದೆ ಪೊಳ್ಳಾದುದು ಕಾರ್ಮಿಕರ ನೆನಪಿನಿಂದ ಅಳಿಸಿಹೋಗಿರಲಿಲ್ಲ.

ತಾ. 14 ಸಪ್ಟೆಂಬರಿನ ಮುಷ್ಕರಕ್ಕೆ ಸಿ. ಐ. ಟಿ. ಯು(CITU), ಎ. ಐ. ಟಿ. ಯು. ಸಿ. (AITUC), ಎಚ್. ಎಮ್. ಎಸ್. (H.M.S) ಮುಂತಾದ ಕೇಂದ್ರ ಕಾರ್ಮಿಕ ಸಂಘಗಳೂ, ಜೀವವಿಮೆ, ಸಾಮಾನ್ಯವಿಮೆ, ರಿಸರ್ವ್ ಬ್ಯಾಂಕ್, ವಾಣಿಜ್ಯಬ್ಯಾಂಕ್, ಕೋಲ್ ಇಂಡಿಯಾ, ಎಚ್. ಎಮ್. ಟಿ., ಎಚ್. ಎ. ಎಲ್., ಭಾರತ್ ಅರ್ಥ್ ಮೂವರ್ಸ್, ಭಾರತ್ ಇಲೆಕ್ಟ್ರಾನಿಕ್ಸ್, ಐ. ಟಿ. ಐ., ಇಲೆಕ್ಟ್ರಾನಿಕ್ ಕಾರ್ಪೊರೇಶನ್, ಐ. ಓ. ಸಿ, ಇಂಡಿಯನ್ ಏರ್‌ಲೈನ್ಸ್, ಕೊಪ್ಪರ್ ಕಾರ್ಪೊರೇಶನ್, ಅಲ್ಯುಮಿನಿಯಮ್ ಕಾರ್ಪೊರೇಶನ್, ಭಾರತ್ ಹೆವಿ ಇಲೆಕ್ಟ್ರಿಕಲ್ಸ್, ಹೆವಿ ಇಂಜಿನಿಯರಿಂಗ್ ಕಾರ್ಪೊರೇಶನ್, ಹಿಂದುಸ್ತಾನ್ ಶಿಪ್‌ಯಾರ್ಡ್, ಗನಿ ಮತ್ತು ಉಕ್ಕು ಮುಂತಾದ ಅನೇಕ ಸಂಸ್ಥೆಗಳ ಅಖಿಲ ಭಾರತ ಮಟ್ಟದ ಕಾರ್ಮಿಕ ಸಂಘಗಳೂ ಕರೆಕೊಟ್ಟಿದ್ದವು. ಅನೇಕ ಕಡೆಗಳಲ್ಲಿ ಮುಷ್ಕರದ ಯಶಸ್ಸಿಗಾಗಿ ಜಂಟಿ ಪ್ರಚಾರಗಳನ್ನೂ ಮಾಡಿದ್ದವು. ಐ. ಎನ್. ಟಿ. ಯು.ಸಿ.(INTUC) ಯು ಮೊದಲು ಮುಷ್ಕರದಲ್ಲಿ ಭಾಗವಹಿಸಲು ನಿರಾಕರಿಸಿ ಬೆಂಗಳೂರಿನ ಅಧಿವೇಶನದಲ್ಲಿ ಪಾಲುಗೊಳ್ಳಲಿಲ್ಲ. ಆದರೆ, ಅದರ ಅನೇಕ ಕಾರ್ಮಿಕ ಸಂಘಗಳು ಮುಷ್ಕರದಲ್ಲಿ ಭಾಗವಹಿಸಲು ಆತುರವಾಗಿದ್ದವು. ಹೀಗಾಗಿ, ಸಪ್ಟೆಂಬರ್ 2 ರಂದು ಮುಂಬಯಿಯಲ್ಲಿ ಸೇರಿದ ಅದರ ವಿಶೇಷ ಅಧಿವೇಶನದಲ್ಲಿ ಒಂದು ದಿನದ ಮುಷ್ಕರದಲ್ಲಿ ಭಾಗವಹಿಸಲು ನಿರ್ಧರಿಸಿತು. ಆದರೆ, ಮುಷ್ಕರ ಸಮೀಪಿಸುತ್ತಿರುವವರೆಗೂ ಅದರ ಯಶಸ್ಸಿಗಾಗಿ ಏನೂ ಕೆಲಸಮಾಡಲಿಲ್ಲ. ಮುಷ್ಕರ ಪ್ರಾರಂಭವಾದಾಗ ಅನೇಕ ಕಡೆಗಳಲ್ಲಿ ಐ. ಎನ್. ಟಿ. ಯು. ಸಿ. ಯ ಘಟಕಗಳು ತಮ್ಮ ಸದಸ್ಯರನ್ನು ಮುಷ್ಕರದಲ್ಲಿ ಭಾಗವಹಿಸಲು ಬಿಡಲೇ ಇಲ್ಲ. ಅಷ್ಟಲ್ಲದೆ, ಮುಷ್ಕರ ಮುರಿಯುವಂತೆ ಅವರನ್ನು ಪ್ರಚೋದಿಸಿದವು. ಆದರೂ, ಸಂತೋಷದ ವಿಷಯವೆಂದರೆ, ಹಲವು ಕಡೆಗಳಲ್ಲಿ ಐ. ಎನ್. ಟಿ. ಯು. ಸಿ. ಗೆ ಸೇರಿದ ಕಾರ್ಮಿಕ ಸಂಘಗಳೂ ಸದಸ್ಯರೂ ಸ್ವಯಂ ಸ್ಫೂರ್ತಿಯಿಂದ ಮುಷ್ಕರ ಹೋರಾಟದಲ್ಲಿ ಭಾಗವಹಿಸಿದ್ದರು. ಎಚ್. ಎಮ್. ಎಸ್. ಗೆ ಸೇರಿದ ಕೆಲವು ಕಾರ್ಮಿಕ ಸಂಘಗಳು ಉಕ್ಕು ಕೈಗಾರಿಕೆಯಲ್ಲಿ ಮುಷ್ಕರಕ್ಕೆ ನೋಟೀಸನ್ನೇ ಕೊಟ್ಟಿರಲಿಲ್ಲ. ಬ್ಯಾಂಕು ನೌಕರರ ಎ. ಐ. ಬಿ. ಇ. ಎ.(AIBEA) ಯು ಮೊದಲು ಮುಷ್ಕರದಲ್ಲಿ ಭಾಗವಹಿಸಲು ನಿರ್ಧರಿಸಿದ್ದರೂ, ಕೊನೆಯ ಘಳಿಗೆಯಲ್ಲಿ ಹಿಂದೇಟು ಹೊಡೆಯಿತು. ಬ್ಯಾಂಕು ನೌಕರರು ಮುಷ್ಕರದಲ್ಲಿ ಭಾಗವಹಿಸದಿರುವಂತೆ ಗುಪ್ತವಾಗಿ ತನ್ನ ಘಟಕಗಳಿಗೆ ಆದೇಶ ನೀಡಿತು. ಆದರೂ ಕಲ್ಕತ್ತಾ ಮತ್ತು ಮದ್ರಾಸು ನಗರಗಳಲ್ಲಿ ಬ್ಯಾಂಕು ನೌಕರರು ವ್ಯಾಪಕವಾಗಿ ಮುಷ್ಕರದಲ್ಲಿ ಭಾಗವಹಿಸಿದ್ದರು.

ಇಷ್ಟೆಲ್ಲಾ ಕುಂದುಕೊರತೆಗಳಿದ್ದರೂ, ಸಿ. ಐ. ಟಿ. ಯು. ವಿನ ವರದಿಯಂತೆ (Working class: october, 1979) ದೇಶಾದ್ಯಂತ ಸುಮಾರು 15 ಲಕ್ಷ ಸಾರ್ವಜನಿಕ ಕ್ಷೇತ್ರದ ನೌಕರರು ಈ ಚರಿತ್ರಾರ್ಹವಾದ ಮುಷ್ಕರದಲ್ಲಿ ಭಾಗವಹಿಸಿದ್ದರೆಂದು ಅಂದಾಜು ಮಾಡಲಾಗಿದೆ. ಫಿನಾನ್ಸಿಯಲ್ ಎಕ್ಸ್‌ಪ್ರೆಸ್ (ತಾ. 15-9-79) ಮುಷ್ಕರದ ಕುರಿತು ಮುಖ ಪುಟದಲ್ಲಿಯೇ ತನ್ನ ವಿಶೇಷ ವರದಿಯನ್ನು ಪ್ರಕಟಿಸಿದೆ. ಈ ವರದಿಯಂತೆ ಮುಂಬಯಿಯಲ್ಲಿ 2 ಲಕ್ಷ ಕಾರ್ಮಿಕರೂ, ಹೈದರಾಬಾದಿನಲ್ಲಿ 60,000 ಕಾರ್ಮಿಕರೂ ಮತ್ತು ಬೆಂಗಳೂರಿನಲ್ಲಿ 90,000 ಕಾರ್ಮಿಕರೂ ಮುಷ್ಕರದಲ್ಲಿ ಭಾಗವಹಿಸಿರುವುದಾಗಿ ತಿಳಿಸಲಾಗಿದೆ. ಬೆಂಗಳೂರಿನಲ್ಲಿ ಇಂಡಿಯನ್ ಟೆಲಿಫೋನ್ ಇಂಡಸ್ಟ್ರೀಸ್ (ITI)ನಲ್ಲಿ ಅನಿರ್ದಿಷ್ಟಾವಧಿಯ ಮುಷ್ಕರವು ತಾ. 14-9-79 ರಿಂದಲೇ ಪ್ರಾರಂಭವಾಗಿತ್ತು. ರಿಸರ್ವ್ ಬ್ಯಾಂಕಿನ ಸುಮಾರು 25,000 ಮೂರನೇ ದರ್ಜೆಯ ನೌಕರರು ತಮ್ಮ ದೀರ್ಘಾವಧಿಯ ಮುಷ್ಕರ ಹೋರಾಟದಲ್ಲಿ ಅನೇಕ ಕಷ್ಟನಷ್ಟಗಳನ್ನನುಭವಿಸಿ ಕೊನೆಗೂ ತಮ್ಮ ಬೇಡಿಕೆಗಳ ಕುರಿತು ಒಂದು ವ್ಯಾಪಕ ಒಪ್ಪಂದಕ್ಕೆ ಬಂದಿದ್ದರೂ, ತಾ. 14ರ ಮುಷ್ಕರದಲ್ಲಿ ಸಾರ್ವಜನಿಕ ಕ್ಷೇತ್ರದ ನೌಕರರಬೆಂಬಲವಾಗಿ ತಾವೂ ಭಾಗವಹಿಸಿದ್ದರು. ಅವರ ಮುಷ್ಕರವನ್ನು ಮುರಿಯಲು ಜನತಾ ಸರಕಾರವು ಟ್ರಿಬ್ಯೂನಲ್ ಸ್ಥಾಪಿಸಿ ನಂತರ ಸುಗ್ರೀವಾಜ್ಞೆ ಹೊರಡಿಸಿ ಮುಷ್ಕರ ಕಾನೂನು ಬಾಹಿರವೆಂದು ಮಾಡಿತು. ಆದರೆ ನೌಕರರು ಧೃತಿಗೆಡದೆ, ದ್ವಿಪಕ್ಷೀಯ ಒಪ್ಪಂದದಿಂದಲೇ ತಮ್ಮ ಬೇಡಿಕೆಗಳಿಗೆ ಸೂಕ್ತ ಪರಿಹಾರ ಪಡೆದ ನಂತರವೇ ಅನಿರ್ದಿಷ್ಟಾವಧಿ ಕಾಲದ ಮುಷ್ಕರವನ್ನು ಹಿಂತೆಗೆದುಕೊಂಡರು. ಇಂಡಿಯನ್ ಓಯಿಲ್ ಕಾರ್ಪೊರೇಶನ್ನಿನ ನೌಕರರೂ ತಾ. 13ರ ರಾತ್ರಿ ತಮ್ಮ ಬೇಡಿಕೆಗಳ ಕುರಿತು ಕೇಂದ್ರಪೆಟ್ರೋಲಿಯಂ ಮತ್ತು ರಾಸಾಯನಿಕ ಮಂತ್ರಿಯೊಂದಿಗೆ ನಡೆದಒಪ್ಪಂದದಂತೆ ತಾ. 14 ರಿಂದ ನಡೆಸಲಿರುವ 2 ದಿನಗಳ ಮುಷ್ಕರವನ್ನು ಹಿಂತೆಗೆದುಕೊಂಡಿದ್ದರೂ, ತಾ. 14ರಂದು ಇತರ ನೌಕರರಿಗೆ ಬೆಂಬಲವಾಗಿ ಅನೇಕ ಕಡೆಗಳಲ್ಲಿ ಇವರೂ ಮುಷ್ಕರದಲ್ಲಿ ಪಾಲುಗೊಂಡಿದ್ದರು. ಜೀವವಿಮೆ, ಸಾಮಾನ್ಯವಿಮೆ, ರಿಸರ್ವ್‌ಬ್ಯಾಂಕ್, ವಾಣಿಜ್ಯ ಬ್ಯಾಂಕ್, ಹಡಗು ಕೈಗಾರಿಕೆ ಮುಂತಾದವುಗಳಲ್ಲಿ ಮುಷ್ಕರವು ಅತ್ಯಂತ ಯಶಸ್ವಿಯಾಗಿದ್ದು, ಇಂಡಿಯನ್ ಏರ್‌ಲೈನ್ಸ್‌ನ ನೌಕರರೂ ಮುಷ್ಕರದಲ್ಲಿ ಭಾಗವಹಿಸಿದ್ದುದರಿಂದ ಮುಂಬಯಿ ಮತ್ತು ಕಲ್ಕತ್ತಾ ನಗರಗಳ ನಡುವಿನ ಸುಮಾರು 60 ವಿಮಾನಗಳ ಹಾರಾಟ ಸ್ಥಗಿತಗೊಂಡಿತ್ತು.

ಮುಷ್ಕರವು ಅಭೂತಪೂರ್ವವಾಗಿ ಯಶಸ್ವಿಯಾದುದಕ್ಕೆಸಿ. ಐ. ಟಿ. ಯು. ವಿನ ಅಧ್ಯಕ್ಷರಾದ ಕಾಂ. ಬಿ. ಟಿ. ರಣದಿವೆಯವರು ತಮ್ಮ ಸಂಘದ ಪರವಾಗಿ ದೇಶಾದ್ಯಂತ ಸಾರ್ವಜನಿಕ ಕ್ಷೇತ್ರದ ಅಸಂಖ್ಯಾತ ಕಾರ್ಮಿಕರಿಗೆ ಅಭಿನಂದನೆಗಳನ್ನು ತಿಳಿಸಿದ್ದಾರೆ. ಸರಕಾರದ ವೇತನ ಸ್ಥಗಿತ ಹಾಗೂ ಕಡಿತಗಳ ಧೋರಣೆಯ ವಿರುದ್ಧ ಮತ್ತು ಕಾರ್ಮಿಕ ವಿವಾದಗಳಲ್ಲಿ ಬ್ಯೂರೋ ಆಫ್ ಪಬ್ಲಿಕ್ ಎಂಟರ್‌ಪ್ರೈಸಸ್‌ನ (BPE) ಅನವಶ್ಯಕ ಹಸ್ತಕ್ಷೇಪದ ವಿರುದ್ಧವಾಗಿ ಸರಕಾರಕ್ಕೆ ಎಚ್ಚರಿಕೆಯನ್ನು ನೀಡಿದ್ದಾರೆ. ಮುಷ್ಕರದಿಂದ ಸರಕಾರವು ಪಾಠಕಲಿಯದಿದ್ದರೆ, ತನ್ನ ಧೋರಣೆಯಲ್ಲಿ ಬದಲಾವಣೆ ಮಾಡದಿದ್ದರೆ, ಸಾರ್ವಜನಿಕ ಕ್ಷೇತ್ರದ ನೌಕರರು ಇನ್ನಷ್ಟು ದೊಡ್ಡ ಹೋರಾಟಗಳನ್ನು ನಡೆಸುವುದಾಗಿ ಎಚ್ಚರಿಸಿದ್ದಾರೆ.

ತಾ. 14ರ ಸಾರ್ವತ್ರಿಕ ಮುಷ್ಕರದ ಕೆಲವು ಸತ್ಪರಿಣಾಮಗಳು ಈಗಾಗಲೇ ಸ್ವಲ್ಪಮಟ್ಟಿಗೆ ಕೈಗೂಡತೊಡಗಿವೆ. ಇಂಡಿಯನ್ ಆಯಿಲ್ ಕಾರ್ಪೊರೇಶನ್ನಿನ ಮತ್ತು ರಿಸರ್ವ್ ಬ್ಯಾಂಕಿನ ನೌಕರರೊಂದಿಗೆ ಇತ್ತೀಚೆಗೆ ಮಾಡಿಕೊಂಡ ಒಪ್ಪಂದದಂತೆ, ಕೇಂದ್ರ ಸರಕಾರ ಮತ್ತು ಸಂಬಂಧಪಟ್ಟ ಆಡಳಿತೆಗಳು ವೇತನ ಹೆಚ್ಚಳ, ತುಟ್ಟಿಭತ್ತೆ, ಇತ್ಯಾದಿಗಳ ಕುರಿತಾದ ತಮ್ಮ ಬಿಗುಧೋರಣೆಯನ್ನು ಕೈಬಿಟ್ಟು ಕೆಲವು ರಿಯಾಯತಿಗಳನ್ನು ನೀಡಿವೆ. ಆದರೂ ಇನ್ನೂ ಅನೇಕ ಬೇಡಿಕೆಗಳನ್ನು ಈಡೇರಿಸಬೇಕಾಗಿದೆ. ಮುಖ್ಯವಾಗಿ: ಸ್ಥಗಿತಗೊಂಡ ದ್ವಿಪಕ್ಷೀಯ ಸಂಧಾನಗಳನ್ನು ಪುನಃ ಪ್ರಾರಂಭಿಸಬೇಕು. ಎಲ್ಲಾ ವರ್ಗದ ಕಾರ್ಮಿಕರಿಗೂ ಜೀವನ ವೆಚ್ಚದ ಸೂಚ್ಯಂಕವು ಹೆಚ್ಚಿದಂತೆ ಅದೇ ಕ್ರಮಾನುಗತವಾಗಿ ತುಟ್ಟಿಭತ್ತೆಯನ್ನು ಯಾವ ಗರಿಷ್ಠ ಮಿತಿ ಇಲ್ಲದೆ ಕೊಡಬೇಕು. ಅನವಶ್ಯಕವಾಗಿ ದ್ವಿಪಕ್ಷೀಯ ಸಂಧಾನಗಳಲ್ಲಿ ಹಸ್ತಕ್ಷೇಪ ಮಾಡುವ ಬ್ಯೂರೋ ಆಫ್ ಪಬ್ಲಿಕ್ ಎಂಟರ್‌ಪ್ರೈಸಸ್‌ನ್ನು ಬರಕಾಸ್ತುಗೊಳಿಸಬೇಕು. ಕಾರ್ಮಿಕರೆಲ್ಲರಿಗೂ ಸಂಘಟನಾ ಸ್ವಾತಂತ್ರ್ಯ ಕೊಡಬೇಕು ಮತ್ತು ಸಧ್ಯದ ಕೈಗಾರಿಕಾ ಸಂಬಂಧಗಳ ಮಸೂದೆಯನ್ನು ಕೈಬಿಡಬೇಕು. ಎಲ್ಲಾ ಕಾರ್ಮಿಕರಿಗೂ ವಾರ್ಷಿಕ ಬೋನಸ್ಸನ್ನು ಕೊಡಬೇಕು. ಜೀವನ ವೆಚ್ಚದ ಸೂಚ್ಯಂಕವು ಬೆಲೆ ಏರಿಕೆಯನ್ನು ಸಮರ್ಪಕವಾಗಿ ಸೂಚಿಸುವುದಿಲ್ಲವಾದುದರಿಂದ ಅದನ್ನು ಪುನಃ ರಚಿಸಬೇಕು. ಸರಕಾರವು ವೇತನ, ತುಟ್ಟಿಭತ್ತೆ, ಬೋನಸ್ ಮುಂತಾದ ವಿಷಯಗಳಲ್ಲಿ ತನ್ನ ಬಿಗು ಧೋರಣೆಯನ್ನು ಬಿಡಬೇಕು ಹಾಗೂ ವೇತನ ಕಡಿತ ಮತ್ತು ವೇತನ ಸ್ಥಗಿತ ಧೋರಣೆಗಳನ್ನೂ ಬಿಡಬೇಕು. ಈ ಬೇಡಿಕೆಗಳ ಆಧಾರದಲ್ಲಿ ಸಾರ್ವಜನಿಕ ಕ್ಷೇತ್ರದ ಕಾರ್ಮಿಕರ ಹೋರಾಟ ಪ್ರಾರಂಭವಾಗಿದೆ. ಮುಂದಿನ ಕಾರ್ಯಕ್ರಮಗಳನ್ನು ನಿರ್ಧರಿಸಲು ಅವರ ಅಖಿಲ ಭಾರತ ಮಟ್ಟದ ಕ್ರಿಯಾ ಸಮಿತಿಯು ಸಧ್ಯದಲ್ಲಿಯೇ ಸಭೆ ಸೇರಲಿದೆ. ಅವರ ಹೋರಾಟಕ್ಕೆ ಜಯವಾಗಲಿ.

ಭಾರತದ ಬಡ ಮಕ್ಕಳು

* ಭಾರತದಲ್ಲಿ ಒಟ್ಟು ಮಕ್ಕಳ ಸಂಖ್ಯೆ ಸುಮಾರು 250 ಮಿಲಿಯ.

* ಅವರಲ್ಲಿ ಸುಮಾರು 30 ಮಿಲಿಯ ಮಕ್ಕಳು ಕೂಲಿ ಕೆಲಸಮಾಡುತ್ತಿದ್ದಾರೆ. ಪ್ರಪಂಚದಲ್ಲಿಯೇ ಭಾರತದಲ್ಲಿರುವ ಕೆಲಸಗಾರ ಮಕ್ಕಳ ಸಂಖ್ಯೆಯು ಅತ್ಯಧಿಕ.

* ಶೇ. 90 ರಷ್ಟು ಮಕ್ಕಳು ಪೌಷ್ಟಿಕ ಆಹಾರದ ಕೊರತೆಯಿಂದ ಒಂದಲ್ಲ ಒಂದು ಖಾಯಿಲೆಗೊಳಗಾಗಿದ್ದಾರೆ.

* 60 ಮಿಲಿಯ ಬಡಮಕ್ಕಳಿಗೆ ಜೀವನದ ಅವಶ್ಯಕ ವಸ್ತುಗಳೇ ಸಿಗುತ್ತಿಲ್ಲ.

* 30 ಲಕ್ಷ ಮಕ್ಕಳು ಒಂದಲ್ಲ ಒಂದು ಅಂಗ ಊನದಿಂದ ನರಳುತ್ತಿದ್ದಾರೆ.

* 25 ಲಕ್ಷ ಮಕ್ಕಳು 'ಎ' ಜೀವಾತು ಇರುವ ಪೌಷ್ಟಿಕ ಆಹಾರದ ಕೊರತೆಯಿಂದಾಗಿ ಕುರುಡರಾಗಿದ್ದಾರೆ.

* 2 ಲಕ್ಷ ಮಕ್ಕಳು ಬಿಕ್ಷುಕರಾಗಿದ್ದಾರೆ ಅಥವಾ ಅಲೆಮಾರಿಗಳಾಗಿದ್ದಾರೆ

* ಪೌಷ್ಟಿಕ ಆಹಾರದ ಕೊರತೆಯಿಂದಾಗಿಯೇ ದೇಶದಲ್ಲಿ ಪ್ರತಿ ತಿಂಗಳೂ 1 ಲಕ್ಷದಷ್ಟು 5 ವರ್ಷಕ್ಕಿಂತ ಕೆಳಗಿನ ಪ್ರಾಯದ ಮಕ್ಕಳು ಸಾಯುತ್ತಿವೆ.

* ಪ್ರತಿ ವರ್ಷವೂ ಭಾರತದಲ್ಲಿ 3.2 ಮಿಲಿಯ ಮಕ್ಕಳು ಹೊಟ್ಟೆಬಟ್ಟೆಗಿಲ್ಲದೆ ಸಾಯುತ್ತಿವೆ. ದೇಶದ ವಾರ್ಷಿಕ ಮರಣ ಸಂಖ್ಯೆಯಲ್ಲಿ ಶೇ. 40 ರಷ್ಟು ಮಕ್ಕಳ ಸಾವೇ ಆಗಿದೆ.

* ಅಂತರಾಷ್ಟ್ರೀಯ ಮಕ್ಕಳ ವರ್ಷವೂ ಅಂತರಾಷ್ಟ್ರೀಯ ಮಹಿಳೆಯರ ವರ್ಷದಂತೆಯೇ ಮಂತ್ರಿಗಳ ಹಾಗೂ ಸಮಾಜದ ಪುಢಾರಿಗಳ ಭಾಷಣಗಳಲ್ಲಿ, ಸರಕಾರದ ಪ್ರಚಾರ ಘೋಷಣೆಗಳಲ್ಲಿ, ಸಭೆ ಸಮಾರಂಭಗಳಲ್ಲಿ, ಅಂಚೆಚೀಟಿಪ್ರಕಟಿಸುವುದರಲ್ಲಿ ಮುಕ್ತಾಯವಾಗಲಿದೆ.

* ಮಕ್ಕಳ ಕಲ್ಯಾಣಕ್ಕೆಂದು ಈ ವರುಷದ ಪ್ರಾರಂಭದಲ್ಲಿಯೇ ರೂ. 1 ಕೋಟಿ ನಿಧಿ ಸಂಗ್ರಹಿಸಬೇಕೆಂದು ಯೋಚಿಸಲಾಗಿದ್ದರೂ, ದೇಶಾದ್ಯಂತ ಇದುವರೆಗೆ ಈ ನಿಧಿಗೆ ಕೇವಲ ರೂ. 22 ಲಕ್ಷ ಸಂಗ್ರಹವಾಗಿದೆ. ರಾಜ್ಯ ಹಾಗೂ ಕೇಂದ್ರ ಮಟ್ಟಗಳಲ್ಲಿ ಅಂತರಾಷ್ಟ್ರೀಯ ಮಕ್ಕಳ ವರುಷದ ಅಂಗವಾಗಿ ನಿಧಿ ಸಂಗ್ರಹಿಸಲು ನೀಡುವ ಉದಾರ ದಾನದ ಮೊತ್ತಕ್ಕೆ ಸಂಪೂರ್ಣ ತೆರಿಗೆ ವಿನಾಯತಿ ಮಾಡಬೇಕೆಂಬ ಸೂಚನೆ ಇದ್ದರೂ, ಚರಣಸಿಂಗರ 1979ರ ಕೇಂದ್ರ ಮುಂಗಡ ಪತ್ರದಲ್ಲಿ ಇವಕ್ಕೆ ಒಪ್ಪಿಗೆ ನೀಡಲೇ ಇಲ್ಲ. ಸಧ್ಯ ಅಂತಹ ದಾನದ ಮೊತ್ತಕ್ಕೆ ಕೇವಲ ಶೇ. 50 ರಷ್ಟೇ ತೆರಿಗೆ ವಿನಾಯತಿ ದೊರೆಯುವುದು. ಆದರೆ ಕುಟುಂಬ ಯೋಜನೆಯ ಸಹಾಯ ನಿಧಿಗೆ ನೀಡುವ

[6ನೇ ಪುಟ ನೋಡಿ]

ಘೋಷಿತ ಉದ್ದೇಶ ಸಾಧನೆಗಾಗಿ

ನಮ್ಮ ದೇಶದ ದೊಡ್ಡ ಬಂಡವಾಳಗಾರಿ ಮನೆತನಗಳ ಒಡೆತನದಲ್ಲಿರುವ ಪತ್ರಿಕಾರಂಗದ ಒಂದು ವಿಭಾಗವು ಇತ್ತೀಚೆಗಂತೂ ತನ್ನ 'ಪ್ರತಿಭಾವಂತ' ಸಂಪಾದಕರು ಮತ್ತು ಬಾಡಿಗೆಯ ಬರಹಗಾರರ ನೆರವಿನಿಂದ ಮುಂಬರುವ ಚುನಾವಣೆಯಲ್ಲಿ ಇಂದಿರಾಗಾಂಧಿಗೆ ವಿಜಯವಾಗುವಂತೆ ಶತಪ್ರಯತ್ನ ಮಾಡುತ್ತಿದೆ. "ನಿರಂತರ ಅಭಿವೃದ್ಧಿಗಾಗಿ ಸುಭದ್ರ ಸರಕಾರ ಬೇಕು" ಎನ್ನುವುದೇ ಅವು ತಮ್ಮ ವರ್ತನೆಗೆ ಕೊಡುತ್ತಿರುವ ಕಾರಣ. 'ಸುಭದ್ರ ಸರಕಾರ ರಚನೆಗಾಗಿ ಇಂದಿರಾಗಾಂಧಿಗೆ ಮತನೀಡಿ' ಎಂಬ ಘೋಷಣೆಯನ್ನು ಜನಪ್ರಿಯಗೊಳಿಸಲು ಈ ಪತ್ರಿಕೆಗಳು ತಮ್ಮ ಸಂಪಾದಕೀಯ, ಅಗ್ರಲೇಖನಗಳು, ಟಿಪ್ಪಣಿಗಳು, ವಿಶೇಷ ಲೇಖನಗಳು ಮತ್ತು ವಾರ್ತಾವರದಿಗಳನ್ನು ಸಹ ಧಾರಾಳವಾಗಿ ಬಳಸಿಕೊಂಡಿವೆ. ಆದರೆ ಈ ಲೇಖನಗಳೆಲ್ಲ ಯಾವ ಜನರನ್ನು ಉದ್ದೇಶಿಸಿ ಬರೆಯಲ್ಪಟ್ಟಿವೆಯೋ ಅಂತಹ ಮತದಾರರು ಇಂದಿರಾಗಾಂಧಿಯ ಹತ್ತು ವರ್ಷಗಳ ದುರಾಡಳಿತೆಯ ಕಹಿಯನ್ನು ಉಂಡಿದ್ದಾರೆ: ಜೇಲುವಾಸ, ಪೋಲೀಸರಲಾಠಿ, ಗುಂಡೇಟು, ತುರ್ತುಪರಿಸ್ಥಿತಿಯ ಆಡಳಿತೆ, ಇಂದಿರಾಗಾಂಧಿಯ ಪ್ರೀತಿಯ ಮಗರಾಯ ಸಂಜಯಗಾಂಧಿ ಮತ್ತು ಯುವ ಕಾಂಗ್ರೆಸ್ ಮುಂದಾಳುಗಳ ಲಂಗುಲಗಾಮಿಲ್ಲದ ಕಾರುಭಾರು, ಇವುಗಳ ರುಚಿಯನ್ನು ಚೆನ್ನಾಗಿ ಅನುಭವಿಸಿದ್ದಾರೆ. ಇಂದಿರಾಗಾಂಧಿಯ ಬಾಡಿಗೆಯ ಬರಹಗಾರರಲ್ಲಿ ಕೆಲವರು ನಾಚುಗೆಬಿಟ್ಟು ಧಾಣಾಡಂಗುರವಾಗಿ-ಇಂದಿರಾ ಪ್ರತಿಷ್ಠೆ ಬೆಳೆಸುವ ಕೃತ್ಯದಲ್ಲಿ ತೊಡಗಿದ್ದರೆ ಇನ್ನು ಕೆಲವು ಬುದ್ಧಿವಂತರು ಇನ್ನೂ ಸ್ವಲ್ಪ ಸುಧಾರಿತ ಕ್ರಮದಲ್ಲಿ ಆ ಕೆಲಸ ಮಾಡುತ್ತಿದ್ದಾರೆ. ಅವರು ತುರ್ತುಪರಿಸ್ಥಿತಿಯ ಅತಿರೇಕಗಳ ಬಗ್ಗೆ ಒಂದೆರಡು ಮಾತು ಬರೆದ ಹಾಗೆ ಮಾಡಿದರೂ, ಈಗಿನ ಪರಿಸ್ಥಿತಿಯಲ್ಲಿ ಇಂದಿರಾ ಮತ್ತು ಆಕೆಯ ಪಕ್ಷವನ್ನು ಬಿಟ್ಟರೆ ನಮ್ಮ ದೇಶಕ್ಕೆ ಬೇರೆ ಗತಿಯೇ ಇಲ್ಲ ಎನ್ನುವ ಮೂಲಕ ಇಂದಿರಾಗಾಂಧಿ ನಮಗೆ ಅನಿವಾರ್ಯ ಎನ್ನುತ್ತಿದ್ದಾರೆ. ಟೈಮ್ಸ್ ಆಫ್ ಇಂಡಿಯಾದಲ್ಲಿ ಕಾಣಬರುವ ಲೇಖನಗಳು ಹೆಚ್ಚುಪಾಲು ಈ ವರ್ಗಕ್ಕೆ ಸೇರಿವೆ.

ಹಿರಿಯ ಬಂಡವಾಳಗಾರರಿಗೆ ಸೇರಿದ ಇನ್ನೂ ಒಂದು ಪತ್ರಿಕೆಗಳ ಗುಂಪಿದೆ. ಇವುಗಳಲ್ಲಿ ಮುಖ್ಯವಾದುದು 'ಇಂಡಿಯನ್ ಎಕ್ಸ್‌ಪ್ರೆಸ್'. ಈ ಗುಂಪು ಬಹಿರಂಗವಾಗಿಯೇ ಜನತಾಪಕ್ಷದ ಪರವಾಗಿದೆ. ಜನತಾಪಕ್ಷ ಚುನಾವಣೆಯಲ್ಲಿ ಗೆದ್ದು ಅಧಿಕಾರಕ್ಕೆ ಬರುವುದು ಖಂಡಿತಾ ಸಾಧ್ಯವಿಲ್ಲವೆಂಬುದು ಇವುಗಳಿಗೆ ಚೆನ್ನಾಗಿಗೊತ್ತು. ಚುನಾವಣಾ ಕಣದಲ್ಲಿರುವ ಮೂರು ಪ್ರಮುಖ ರಾಜಕೀಯ ಬಣಗಳಲ್ಲಿ ಜನತಾ ಪಕ್ಷ ಕೊಟ್ಟಕೊನೆಯ ಸ್ಥಾನಗಳಿಸುವುದೆಂದೂ ಇವಕ್ಕೆ ತಿಳಿದಿದೆ. ಹಾಗಾಗಿ ಕಾಂಗ್ರೆಸ್ (ಐ)ಗೆ ಸ್ಪಷ್ಟ ಬಹುಮತ ಸಿಗಬಾರದು; ಅದು ಸರಕಾರ ರಚಿಸಿಕೊಳ್ಳಲು ಇಡೀ ಜನತಾಪಕ್ಷದೊಂದಿಗಲ್ಲದಿದ್ದರೂ ಜನತಾದೊಳಗಿರುವ ಜಗಜೀವನರಾಮ್ ಗುಂಪು ಮತ್ತು ಪಿ. ಎಸ್. ಪಿ. ಗುಂಪುಗಳ ಬೆಂಬಲ ಯಾಚಿಸುವಂತಹ ಪರಿಸ್ಥಿತಿ ನಿರ್ಮಾಣವಾಗಬೇಕು. ಇದೇ ಈ ಪತ್ರಿಕೆಗಳ ಚುನಾವಣಾ ತಂತ್ರವಿದ್ದಂತೆ ಕಾಣುತ್ತದೆ. ಹಾಗೆಯೇ ಕಾಂಗ್ರೆಸ್ (ಐ) ಪಕ್ಷದ ಜೊತೆಗಿನ ಚೌಕಾಶಿಯಲ್ಲಿ ಚರಣ್‌ಸಿಂಗ್-ಕಾಂಗ್ರೆಸ್ ಮೈತ್ರಿಕೂಟವನ್ನು ದುರ್ಬಲಗೊಳಿಸಲೂ ಜನತಾಪಕ್ಷದಲ್ಲಿನ ಜಗಜೀವನರಾಮ್ ಗುಂಪನ್ನು ಬಲಗೊಳಿಸಲೂ ಈ ಪತ್ರಿಕೆಗಳು ತುಂಬಾ ಪ್ರಯತ್ನಿಸುತ್ತಿವೆ. ಇವುಗಳ ಈ ತಂತ್ರವು ಜನತಾದೊಳಗಿನ ಆರೆಸ್ಸೆಸ್-ಜನಸಂಘ ಗುಂಪುಗಳಿಗಂತೂ ಅಪಾರ ತಲೆನೋವುಂಟುಮಾಡುತ್ತಿದೆ. ರಾಜಕೀಯವಾಗಿ ಎಲ್ಲರಿಂದಲೂ ದೂರೀಕರಿಸಲ್ಪಟ್ಟಿರುವ ಆರೆಸ್ಸೆಸ್ ಜನಸಂಘೀಯರಿಗೆ ಈಗ ತಮ್ಮ ಹಿಂದಿನ ಮಿತ್ರರಾದ ಸಂಸ್ಥಾ ಕಾಂಗ್ರೆಸ್, ಸಿ. ಎಫ್. ಡಿ. ಗಳ ಮುಂದಾಳುಗಳು ಮತ್ತು ಸಮಾಜವಾದಿಗಳ ರಕ್ಷಾಕವಚ ಬಹಳ ಅಗತ್ಯವಾಗಿ ಬಿಟ್ಟಿದೆ.

ಕುತೂಹಲದ ಸಂಗತಿಯೆಂದರೆ ಈ ಎರಡೂ ವಿಭಾಗದ ದೊಡ್ಡ ಬಂಡವಾಳಗಾರರ ಪತ್ರಿಕೆಗಳೂ ಚರಣ್‌ಸಿಂಗ್ ಕಾಂಗ್ರೆಸ್ ಮೈತ್ರಿಕೂಟವನ್ನೂ, ಈ ಮೈತ್ರಿಕೂಟಕ್ಕೆ ಬೆಂಬಲ ಸಾರಿರುವ ಇತರ ಪಕ್ಷಗಳು. ಅದರಲ್ಲೂ ಸಿ. ಪಿ. ಐ. (ಎಂ), ಸಿ.ಪಿ.ಐ. ಹಾಗೂ ಇತರ ವಾಮಪಂಥೀಯ ಶಕ್ತಿಗಳನ್ನೂ ಮುಚ್ಚುಮರೆಯಿಲ್ಲದೆ ತೀಕ್ಷ್ಣವಾಗಿ ದ್ವೇಷಿಸುತ್ತಿವೆ. ಈ ಮೈತ್ರಿಕೂಟದಲ್ಲಿ ಒಡಕುಂಟುಮಾಡಲು, ಅದನ್ನು ಹೀನಾಯವಾಗಿ ಕಾಣಲು ಮತ್ತು ಮೈತ್ರಿಕೂಟಕ್ಕೆ ಬೆಂಬಲ ನೀಡುತ್ತಿರುವ ಪಕ್ಷಗಳನ್ನು ಟೀಕಿಸಲು ಸುವ್ಯವಸ್ಥಿತವಾದ ನಿರಂತರ ಪ್ರಚಾರವೇ ನಡೆಯುತ್ತಿದೆ. ಬೆಲೆಯೇರಿಕೆಯಿಂದ ತೊಡಗಿ ಅಪರಾಧಗಳು ಹೆಚ್ಚುತ್ತಿರುವುದರವರೆಗೆ ಪ್ರತಿಯೊಂದು ಅನಾಹುತಕ್ಕೂ ಉಸ್ತುವಾರಿ ಸರಕಾರ ಮತ್ತು ಅದರ ಮೂರು ತಿಂಗಳ ಆಡಳಿತೆಯೇ ಕಾರಣವೆನ್ನುವಂತೆ ಹೇಳಲಾಗುತ್ತಿದೆ. ಕೈಬೆರಳೆಣಿಕೆಯಷ್ಟರ ಕೋಟ್ಯಾಧೀಶರನ್ನು ಮಾತ್ರ ಸೃಷ್ಟಿಸಿ, ಶೇಕಡಾ 50 ಕ್ಕಿಂತಲೂ ಹೆಚ್ಚಿನ ಭಾರತೀಯರು ಬಡತನದ ಹಂತಕ್ಕಿಂತ ಕೆಳಗಿರುವಂತೆ ಮಾಡಿರುವ ಮೂವತ್ತು ವರ್ಷಗಳ ಕಾಂಗ್ರೆಸ್ ಆಡಳಿತೆಯನ್ನಾಗಲೀ ಮೂವತ್ತು ತಿಂಗಳ ಜನತಾ ಆಡಳಿತೆಯನ್ನಾಗಲೀ ಯಾರೂ ಟೀಕಿಸುತ್ತಿಲ್ಲ! ಚೌಧುರಿ ಚರಣ್‌ಸಿಂಗ್ ಅಂದರೆ 'ಭೂಮಾಲಕ', 'ಕುಲಕ್' 'ಸಂಪ್ರದಾಯವಾದಿ' ಮತ್ತು 'ನಪರೂ ವಿರೋಧಿ' ಎಂಬುದನ್ನು ಹೊಸದಾಗಿ ಮತ್ತೆ ಕಂಡುಕೊಳ್ಳಲಾಗಿದೆ!

ಚರಣ್‌ಸಿಂಗ್ ಅವರ ಮೈತ್ರಿಕೂಟ ಮತ್ತು ಉಸ್ತುವಾರಿ ಸರಕಾರದ ವಿರುದ್ಧ ದೊಡ್ಡ ಬಂಡವಾಳಶಾಹಿ ಪತ್ರಿಕಾರಂಗ ಈ ದ್ವೇಷ ಪೂರಿತ ಪ್ರಚಾರ ನಡೆಸುತ್ತಿರುವುದಕ್ಕೆ ಏನು ಕಾರಣ? ಜನತಾ ಸರಕಾರದ ಉಪಪ್ರಧಾನಿ ಹುದ್ದೆಗೆ ಅವರು ರಾಜೀನಾಮೆ ನೀಡಿದ ಕೂಡಲೇ ಚರಣ್‌ಸಿಂಗ್ ಬಂಡವಾಳಶಾಹಿ ಭೂಮಾಲಕ ವರ್ಗದ ಪ್ರತಿನಿಧಿಯಾಗಿರುವುದು ನಿಂತುಹೋಯಿತೆಂದು ಪತ್ರಿಕಾರಂಗ ಭಾವಿಸಿದೆಯೇ? ಚರಣ್‌ಸಿಂಗ್ ಮತ್ತು ಉಸ್ತುವಾರಿ ಸರಕಾರದಲ್ಲಿರುವ ಇತರರ ಆರ್ಥಿಕ ಸಿದ್ಧಾಂತಗಳ ಸಂಪೂರ್ಣ ಪರಿಚಯ ಈ ಪತ್ರಿಕೆಗಳಿಗಿಲ್ಲವೆ? ಉಸ್ತುವಾರಿ ಸರಕಾರದಲ್ಲಿರುವ ಎಲ್ಲಾ ಮಂತ್ರಿಗಳೂ ಕಳೆದ ಮೂವತ್ತೆರಡು ವರ್ಷಗಳಿಂದಲೂ ಒಂದಲ್ಲೊಂದು ಆಳುವ ಪಕ್ಷದ ಮುಂದಾಳುಗಳಾಗಿದ್ದರಲ್ಲ?

ಭಾರತದ ದೊಡ್ಡ ಬಂಡವಾಳಶಾಹಿಗಳಿಗೂ ಅವರ ಬಾಡಿಗೆಯ ಬರಹಗಾರರಿಗೂ ಚರಣ್ ಮತ್ತು ಉಸ್ತುವಾರಿ ಸರಕಾರದಲ್ಲಿರುವ ಅವರ ಮಿತ್ರರ ಬಗ್ಗೆ ಸಕಲವೂ ಗೊತ್ತಿದೆ. ಕಳೆದ ಜುಲೈನ ರಾಜಕೀಯ ಬಿಕ್ಕಟ್ಟಿನ ಫಲವಾಗಿ ಚರಣ್‌ಸಿಂಗ್ ಪ್ರಧಾನಿ ಪದವಿಗೆ ಏರಿದ ಬಳಿಕ ಈ ಪತ್ರಿಕೆಗಳು ಚರಣ್ ಬಗ್ಗೆ ಹೊಸದಾಗಿ ಏನನ್ನೂ ಕಂಡುಕೊಂಡಿಲ್ಲ.

ಸಿ.ಪಿ.ಐ. (ಎಂ) ಚುನಾವಣಾ ತಂತ್ರ

ದೊಡ್ಡ ಬಂಡವಾಳಶಾಹಿ ಶಕ್ತಿಗಳಿಗೆ ಅತ್ಯಂತ ಭಯವುಂಟಾಗಿರುವುದು ಚರಣ್‌ಸಿಂಗ್ ಅವರ ಮೈತ್ರಿಕೂಟವು ವಹಿಸಲಿರುವ ಪಾತ್ರ ಮತ್ತು ದೇಶದ ಬಂಡವಾಳಶಾಹಿ ಭೂಮಾಲಕ ವರ್ಗ ಆಡಳಿತೆಯ ಮೇಲೆ ಅದು ಬೀರಲಿರುವ ಸದ್ಯದ ಹಾಗೂ ದೀರ್ಘಾವಧಿ ಪರಿಣಾಮಗಳ ಬಗ್ಗೆ ಮಾತ್ರ. ಚರಣ್‌ಸಿಂಗ್ ಮತ್ತು ಅವರ ಮೈತ್ರಿಕೂಟವು ಕಾಂಗ್ರೆಸ್ (ಐ) ಮತ್ತು ಜನತಾಪಕ್ಷಗಳ ವಿರುದ್ಧದ ತಮ್ಮ ಹೋರಾಟದಲ್ಲಿ ಬೆಂಬಲಕ್ಕಾಗಿ ವಾಮಪಂಥೀಯ ಶಕ್ತಿಗಳ ಮೇಲೆ ಆಧರಿಸಿಕೊಂಡಿದ್ದಾರೆ. ಈ ವಾಮಪಂಥೀಯ ಒಕ್ಕೂಟ ಮುಂದಿನ ಲೋಕಸಭೆಯಲ್ಲಿ ಹೆಚ್ಚಿನ ಬಲದೊಂದಿಗೆ ಆರಿಸಿ ಬರಬಹುದು ಎನ್ನುವ ವಿಚಾರವೇ ಈ ದೇಶದ ದೊಡ್ಡ ಬಂಡವಾಳಶಾಹಿಗಳಿಗೆ ಮರಣಾಂತಿಕ ಭಯವುಂಟುಮಾಡಿದೆ. ಇಂದಿರಾಗಾಂಧಿಯ ನಿರಂಕುಶಾಧಿಕಾರ ಮತ್ತು ಆರೆಸ್ಸೆಸ್‌ನ ಕೋಮುವಾದ-ಈ ಅವಳಿ ಅಪಾಯಗಳ ವಿರುದ್ಧ ನಡೆಯುವ ಹೋರಾಟಕ್ಕೆ ಮುನ್ನಡೆ ನೀಡುತ್ತಿರುವುದು ಎಡಪಂಥೀಯ ಒಕ್ಕೂಟ; ಹಾಗಾಗಿ ಅದು ಈ ದೇಶದ ಸ್ಥಾಪಿತ ಹಿತಾಸಕ್ತಿಗಳ ಪಾಲಿಗೆ ದೊಡ್ಡ ಗಂಡಾಂತರವೆಂದೂ ಪರಿಗಣಿಸಲಾಗಿದೆ.

ಚರಣ್ ಮೈತ್ರಿಕೂಟವು ಚುನಾವಣೆಯಲ್ಲಿ ಅಧಿಕ ಸಂಖ್ಯೆಯ ಸ್ಥಾನಗಳನ್ನು ಗೆದ್ದು ಬಂದರೆ ಅದು ಮುಂದೆ ಎಡಪಕ್ಷಗಳ ಒತ್ತಡಕ್ಕೂ ಪಕ್ಕಾಗಬಹುದು ಎಂಬ ಭಯ ಬಂಡವಾಳಶಾಹಿಗಳಿಗಿದೆ. ಇದು ಸ್ಥಾಪಿತ ಹಿತಾಸಕ್ತಿಗಳ, ಗುತ್ತೇದಾರಿ ಬಂಡವಾಳಗಾರರ ಮತ್ತು ಲಾಭಬಡುಕರ ಹಿತಕ್ಕೆ ಧಕ್ಕೆಯುಂಟುಮಾಡಬಹುದು. ಆರ್ಥಿಕ ಮುಗ್ಗಟ್ಟಿನ ಹೊರೆಯನ್ನು ಜನಸಾಮಾನ್ಯರು, ದುಡಿಮೆಗಾರರು, ರೈತರು ಮತ್ತಿತರ ಮಧ್ಯಮ ಆದಾಯದ ವರ್ಗಗಳ ಮೇಲೆ ಜಾರಿಸಿಬಿಡುವ ಸ್ಥಾಪಿತ ಹಿತಾಸಕ್ತಿಗಳ ಯೋಜನೆಗೂ ಇದು ಅಡ್ಡಿಯುಂಟುಮಾಡಬಹುದು. ಬಂಡವಾಳಶಾಹಿ ಮತ್ತು ಭೂಮಾಲಕ ವರ್ಗಗಳಿಂದ ಚೆನ್ನಾಗಿ ಪರೀಕ್ಷಿಸಲ್ಪಟ್ಟು ನಂಬಿಗಸ್ಥರೆಂದು ಪರಿಗಣಿಸಲ್ಪಟ್ಟಿರುವ, ವಾಮಪಂಥೀಯರು ಮತ್ತು ಅವರ ಮಿತ್ರರ ವಿರುದ್ಧ ಹೋರಾಡುವಾಗ ಮಾತ್ರ ಪರಿಣಾಮಕಾರಿಯಾಗಬಲ್ಲ, ಕಾಂಗ್ರೆಸ್ (ಐ) ಮತ್ತು ಜನತಾಪಕ್ಷ-ಇವೆರಡೂ ರಾಜಕೀಯ ಶಕ್ತಿಗಳನ್ನು ಚರಣ್‌ಸಿಂಗ್ ಅವರ ಮೈತ್ರಿಕೂಟವು ದುರ್ಬಲಗೊಳಿಸಿಬಿಟ್ಟೀತೆಂಬ ಭಯವೂ ಅವರಿಗಿದೆ.

ಜುಲೈ ತಿಂಗಳ ಬಿಕ್ಕಟ್ಟು ಆಳುವ ವರ್ಗಗಳ ರಾಜಕೀಯ ಪಕ್ಷಗಳಲ್ಲಿ ತೀವ್ರ ಸ್ವರೂಪದ ಒಡಕನ್ನುಂಟುಮಾಡಿ ಅವುಗಳನ್ನು ಮೂರಾಬಟ್ಟೆ ಮಾಡಿರುವುದು ಮಾತ್ರವಲ್ಲ ದಿನೇದಿನೇ ಆಳವಾಗುತ್ತಿರುವ ಆರ್ಥಿಕ ಮುಗ್ಗಟ್ಟಿನಿಂದ ಈ ದೇಶವನ್ನು ಪಾರುಮಾಡಲು ಯಾವುದೇ ವಾಸ್ತವಿಕ ಸ್ವರೂಪದ ಸಾಮಾಜಿಕ ಆರ್ಥಿಕ ಕಾರ್ಯಕ್ರಮವನ್ನು ಕೈಗೊಳ್ಳಲು ಅವು ಪೂರ್ಣ ವಿಫಲಗೊಂಡಿರುವುದನ್ನು ತೋರಿಸಿಕೊಟ್ಟಿದೆ.

ಈ ದಿಸೆಯಲ್ಲಿ ಚರಣ್‌ಸಿಂಗ್ ಮೈತ್ರಿಕೂಟ ಮತ್ತು ಅದರ ಬೇರೆಬೇರೆ ಘಟಕಗಳೂ ತಮ್ಮ ಅನೇಕ ತಪ್ಪುಗಳ ಮೂಲಕ ಕಾಂಗ್ರೆಸ್ (ಐ) ಮತ್ತು ಜನತಾಪಕ್ಷಗಳಿಗೆ ಟೀಕೆಗೆ ಸಾಕಷ್ಟು ಆಹಾರವನ್ನು ಒದಗಿಸುತ್ತಿವೆ. ಈ ಗಂಭೀರ ರೂಪದ ವೈಫಲ್ಯಗಳೂ, ತಪ್ಪುಗಳೂ ಸ್ವತಃ ಮೈತ್ರಿಕೂಟದ ಘಟಕಗಳಾಗಿರುವ ಪಕ್ಷಗಳಿಗೇ ತುಂಬಾ ಹಾನಿಯುಂಟುಮಾಡುತ್ತಿವೆ ಮಾತ್ರವಲ್ಲ ಚರಣ್‌ಸಿಂಗ್-ಕಾಂಗ್ರೆಸ್ ಒಕ್ಕೂಟಕ್ಕೆ ಬೆಂಬಲ ಸಾರಿರುವ ಎಡಶಕ್ತಿಗಳ ಕೈಗಳನ್ನೂ ದುರ್ಬಲಗೊಳಿಸುತ್ತಿವೆ.

ಆದಕಾರಣ ದೇಶದ ರಾಜಕೀಯದಲ್ಲಾಗುತ್ತಿರುವ ಅನೇಕ ವಿದ್ಯಮಾನಗಳನ್ನು ಈ ಹಿನ್ನೆಲೆಯಲ್ಲಿ ಗಮನಿಸಬೇಕಾಗುತ್ತದೆ. ಕೇರಳದ ಪಂಚಾಯತ್ ಮತ್ತು ಮುನಿಸಿಪಲ್ ಚುನಾವಣೆಗಳಲ್ಲಿ ಎ. ಕೆ. ಆಂಟೋನಿ ಕಾಂಗ್ರೆಸ್-ಸಿ. ಪಿ. ಐ.(ಎಂ)ನೊಂದಿಗೆ ಮೈತ್ರಿಮಾಡಿಕೊಂಡುದು, ಇದೇ ರಾಜ್ಯದಲ್ಲಿ ಕಳೆದ ಹತ್ತು ವರ್ಷಗಳಿಂದಿದ್ದ ಮಾರ್ಕ್ಸಿಸ್ಟ್ ವಿರೋಧಿ ರಂಗದಿಂದ ಸಿ. ಪಿ. ಐ. ಹೊರಬಂದುದು, ಕಾಂಗ್ರೆಸ್ (ಐ) ಮತ್ತು ಆಂಟೋನಿ ಕಾಂಗ್ರೆಸ್‌ಗಳ ಸಂಯುಕ್ತ ಬೆಂಬಲದೊಂದಿಗೆ ಮುಸ್ಲಿಂಲೀಗ್ ರಂಗದ ಅಲ್ಪಸಂಖ್ಯಾತ ಸರಕಾರದ ರಚನೆ, ಸಿ. ಪಿ. ಐ. (ಎಂ) ಚುನಾವಣಾ ಒಪ್ಪಂದವನ್ನೂ ಸ್ಥಾನಗಳ ಹೊಂದಾಣಿಕೆಯನ್ನೂ ಮಾಡಿಕೊಳ್ಳಬೇಕೆಂದಿರುವ ಇತರ ಪಕ್ಷಗಳ ಬಗೆಗೆ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಪ. ಬಂಗಾಳ ಘಟಕವು ಕೆಟ್ಟರೀತಿಯಲ್ಲಿ ವರ್ತಿಸುತ್ತಿದೆಯೆನ್ನಲಾದುದರ ಕುರಿತು ಪತ್ರಿಕೆಗಳಲ್ಲಿ ಮಾಡಲಾಗುತ್ತಿರುವ ನಿರಂತರಪ್ರಚಾರ, ಬಹುಗುಣ ಅವರನ್ನು ಕೇಂದ್ರ ಸಂಪುಟದಿಂದ ಹೊರಗಿಡಲಾದುದು ಮತ್ತು ಅವರು ಹೊಸ ಮಿತ್ರರನ್ನು ಅರಸುತ್ತಿರುವುದು, ಅರಸ್‌ಕಾಂಗ್ರೆಸ್ ಮತ್ತು ಅದು ರಾಜ್ಯಗಳಲ್ಲಿ ಮಾಡಿಕೊಳ್ಳುತ್ತಿರುವ ಚುನಾವಣಾ ಮೈತ್ರಿಯಲ್ಲಿನ ಅಸ್ಥಿರತೆ, ಅಣ್ಣಾ ಡಿ. ಎಂ. ಕೆ. ಯ 'ವಿಶಿಷ್ಟ ಮತ್ತು ಹೊಚ್ಚ ಹೊಸ' ಚುನಾವಣಾ ನೀತಿ, ಅಕಾಲಿದಳದ ಮುಗ್ಗಟ್ಟಿನಿಂದಾಗಿ ಅದು ಎದುರಿಸುತ್ತಿರುವ ಸಮಸ್ಯೆಗಳು, ಕಾಂಗ್ರೆಸ್ (ಐ) ಮತ್ತು ಜನತಾಪಕ್ಷಗಳೊಳಗೆ ನಡೆಯುತ್ತಿರುವ ವಿದ್ಯಮಾನಗಳು, ಇವೆಲ್ಲ ನಮ್ಮ ಸಾಮಾಜಿಕ-ಆರ್ಥಿಕ ಜೀವನವನ್ನು ಆವರಿಸಿರುವ ಆಳವಾದ ಆರ್ಥಿಕ ಮುಗ್ಗಟ್ಟಿನ ಲಕ್ಷಣಗಳು ಮತ್ತು ಅದು ನಮ್ಮ ಆಳುವ ವರ್ಗದ ಪಕ್ಷಗಳ ಮೇಲೆ ಬೀರುತ್ತಿರುವ ಪರಿಣಾಮದ ಫಲ.

ಮುಂದಿನ ಕೆಲವು ವಾರಗಳಲ್ಲಿ ಇನ್ನೂ ಈ ಬಗೆಯ ಹಲವಾರು ಬೆಳವಣಿಗೆಗಳು ಕಾಣಿಸಿಕೊಳ್ಳಲಿವೆ. ಚುನಾವಣಾ ಫಲಿತಾಂಶಗಳು ಬಂದ ಮೇಲೂ ಇದು ನಿಲ್ಲುವುದಿಲ್ಲ. ವರ್ಗಗಳಲ್ಲಿ, ರಾಜಕೀಯ ಶಕ್ತಿಗಳಲ್ಲಿ ತೀವ್ರವಾಗಿ ಬದಲಾಗುತ್ತಿರುವ ಹೊಂದಾಣಿಕೆ ಹಾಗೂ ಮರುಹೊಂದಾಣಿಕೆಯುಂಟಾಗುವ ಹಂತವೊಂದು ಈಗ ನಿರ್ಮಾಣವಾಗುತ್ತಿದೆ; ಈ ಹಂತ ಎಲ್ಲಿಯವರೆಗೆ ಮುಂದುವರಿದೀತೆಂದು ಹೇಳಲು ಸಾಧ್ಯವಿಲ್ಲ.

ಬಂಡವಾಳಶಾಹಿ ಭೂಮಾಲಕ ವರ್ಗದ ರಾಜಕೀಯ ಮುಂದಾಳುಗಳು ತಮ್ಮದೇ ಸಂದರ್ಭ ಸಾಧಕತನ, ಲಾಲಸೆ, ಅಧಿಕಾರ ವ್ಯಾಮೋಹಗಳ ಮೂಲಕ ಸೃಷ್ಟಿಸಿರುವ ಇಂತಹ ಗೊಂದಲಮಯ ರಾಜಕೀಯ ಸನ್ನಿವೇಶದಲ್ಲಿ ಸಿ. ಪಿ. ಐ. (ಎಂ) ಮತ್ತಿತರ ಎಡ ಪ್ರಜಾಪ್ರಭುತ್ವವಾದಿ ಪಕ್ಷಗಳೂ, ಗುಂಪುಗಳೂ ತಮ್ಮ ಚುನಾವಣಾ ತಂತ್ರವನ್ನು ನಿರೂಪಿಸಿಕೊಳ್ಳಬೇಕಾಗಿದೆ. ಪ್ರಸಕ್ತ ಚುನಾವಣಾ ಸಮರದಲ್ಲಿ ತಾವು ಘೋಷಿಸಿಕೊಂಡಿರುವ ಉದ್ದೇಶಗಳನ್ನು ಸಾಧಿಸಿಕೊಳ್ಳಲು ಶಕ್ತವಾಗುವಂತಹ ನಿಲುವನ್ನೂ ಅವು ನಿರ್ಮಿಸಿಕೊಳ್ಳಬೇಕಾಗಿದೆ. ಚುನಾವಣಾ ತಂತ್ರದ ವಿಷಯದಲ್ಲಂತೂ ಮಿತಿಮೀರಿದ ಸಂದರ್ಭ ಸಾಧಕತನ ತೋರಿಸುವ ಹಲವು ಬೂರ್ಜ್ವಾ ರಾಜಕಾರಣಿಗಳೂ ಅವರ ಗುಲಾಮರೂ ಸಿ. ಪಿ. ಐ. (ಎಂ) ಮತ್ತು ಅದರ ಚುನಾವಣಾ ತಂತ್ರವನ್ನು ಸಂದರ್ಭ

[6ನೇ ಪುಟ ನೋಡಿ]

ಫರಿದಾಬಾದ್ – ಪೋಲೀಸ್, ಮಾಲೀಕರು ಮತ್ತು ಗೂಂಡಾಗಳಿಂದ ಭೀಕರ ಹತ್ಯಾಕಾಂಡ

ಹರ್ಯಾನಾದ ಔದ್ಯಮಿಕ ನಗರ ಫರಿದಾಬಾದ್‌ನಲ್ಲಿ ಅಕ್ಟೋಬರ್ 17ರಂದು ಎಲ್ಲಾ ಟ್ರೇಡ್‌ಯೂನಿಯನ್‌ಗಳ ಕ್ರಿಯಾ ಸಮಿತಿಯು ನೀಡಿದ ಕರೆಯ ಮೇರೆಗೆ ಸಾರ್ವತ್ರಿಕ ಬಂದ್ ಆಚರಿಸಲಾದ ಸಂದರ್ಭದಲ್ಲಿ ಪೋಲೀಸರು ನಡೆಸಿದ ಗೋಲಿಬಾರ್, ಗೂಂಡಾಗಳ ಆಕ್ರಮಣ ಮತ್ತು ಮಾಲೀಕ ವರ್ಗದ ಪಿತೂರಿಯಿಂದಾಗಿ ಭೀಕರ ಹತ್ಯಾಕಾಂಡ ನಡೆದು ಹಲವಾರು ಜನ ಮೃತಪಟ್ಟಿದ್ದಾರೆ. ಬಂದ್ ಕರೆಗೆ ಇಡೀ ಫರಿದಾಬಾದ್‌ನಗರವು ಓಗೊಟ್ಟುದರ ಪರಿಣಾಮವಾಗಿ ಎಲ್ಲ ಕಾರ್ಖಾನೆಗಳು, ಅಂಗಡಿ, ಬ್ಯಾಂಕ್, ವಿಮಾಸಂಸ್ಥೆಗಳು, ಶಾಲಾಕಾಲೇಜುಗಳು, ಸಿನೆಮಾ ಮಂದಿರ, ಅಂಚೆ ತಂತಿ ಕಚೇರಿ ಮತ್ತು ದೂರವಾಣಿ ಕೇಂದ್ರಗಳನ್ನೊಳಗೊಂಡು ಎಲ್ಲಾ ಸಾರ್ವಜನಿಕ ಸಂಸ್ಥೆಗಳು ಮುಚ್ಚಲ್ಪಟ್ಟು ಒಂದುದಿನದ ಬಂದ್ ಅಮೋಘ ಯಶಸ್ವಿಯಾಗಿತ್ತು. ಬಂದ್ ಕಾರ್ಯಕ್ರಮ ಈ ರೀತಿ ಯಶಸ್ವಿಯಾಗುವುದು ಖಂಡಿತವೆಂದು ಮೊದಲೇ ತಿಳಿದಿದ್ದ ಫರಿದಾಬಾದ್‌ನ ಕೈಗಾರಿಕೋದ್ಯಮಿಗಳು, ಅವರ ಚೇಲಾಗಳೂ, ಭಜನ್‌ಲಾಲ್ ಸರಕಾರ ಮತ್ತು ಪೋಲೀಸರೊಂದಿಗೆ ಪಿತೂರಿ ನಡೆಸಿ ಕಾರ್ಮಿಕರಿಗೆ 'ಬುದ್ಧಿ ಕಲಿಸುವ' ಉದ್ದೇಶದಿಂದ ತಮ್ಮ ಬಾಡಿಗೆಯ ಗೂಂಡಾಗಳ ಮೂಲಕ ಹಿಂಸಾಕೃತ್ಯವನ್ನು ಪ್ರಚೋದಿಸಿ, ಗೋಲಿಬಾರ್ ನಡೆಸಿ ರಕ್ತದ ಹೊಳೆ ಹರಿಸಿದರು.

ತುರ್ತುಪರಿಸ್ಥಿತಿಯ ವೇಳೆ ತಮ್ಮ ಮೇಲಾಗಿದ್ದ ಅನೇಕ ಅನ್ಯಾಯಗಳನ್ನು ಸರಿಪಡಿಸಬೇಕೆಂದೂ ಮತ್ತು ಇತರ ಬೇಡಿಕೆಗಳ ಈಡೇರಿಕೆಗಾಗಿ ಫರಿದಾಬಾದ್‌ನ ಕಾರ್ಮಿಕರು ಮಾರ್ಚ್ 1977 ರಿಂದಲೇ ಹೋರಾಟ ನಡೆಸುತ್ತಿದ್ದಾರೆ. ಆ ಬಳಿಕ ಅಧಿಕಾರಕ್ಕೆ ಬಂದ ಜನತಾ ಸರಕಾರವೂ ಕಾರ್ಮಿಕರ ಬೇಡಿಕೆಗಳನ್ನು ಈಡೇರಿಸುವ ಬದಲು ತುರ್ತುಪರಿಸ್ಥಿತಿಯಲ್ಲಿ ಮತ್ತು ಅದಕ್ಕಿಂತ ಹಿಂದಿನ ಬನ್ಸಿಲಾಲ್ ಆಡಳಿತೆಯಲ್ಲಿದ್ದಂತೆ ಕಾರ್ಮಿಕರ ಹಕ್ಕುಗಳ ಮೇಲೆ ಅನವರತ ಧಾಳಿ ನಡೆಸಿತು. ಕಳೆದ ಎರಡು ವರ್ಷಗಳಿಂದ ಫರಿದಾಬಾದ್‌ನಲ್ಲಿ ಸೆಕ್ಷನ್ 144 ಹೆಚ್ಚುಕಡಿಮೆ ಯಾವಾಗಲೂ ಜಾರಿಯಲ್ಲಿದೆ. ಕಾರ್ಮಿಕರ ಮೇಲೆ ಸುಳ್ಳು ಮೊಕದ್ದಮೆಗಳನ್ನು ಹಾಕುವುದು, ಮಿತಿಮೀರಿದ ಸಂಖ್ಯೆಯ ಪೋಲೀಸರನ್ನು ಕಾರ್ಖಾನೆಗಳಲ್ಲಿರಿಸಿಕೊಂಡು ಕಾರ್ಮಿಕರನ್ನು ಬೆದರಿಸುವುದು, ಟ್ರೇಡ್‌ಯೂನಿಯನ್ ಕಾರ್ಯಕರ್ತರನ್ನು ಕೆಲಸದಿಂದ ಕಿತ್ತುಹಾಕುವುದು, ರಿಟ್ರೆಂಚ್‌ಮೆಂಟ್, ಲೇ ಆಫ್, ಲಾಕೌಟ್ ಇತ್ಯಾದಿಗಳೆಲ್ಲ ಸಾಮಾನ್ಯವಾಗಿಬಿಟ್ಟಿವೆ. ಭಜನ್‌ಲಾಲ್ ಸರಕಾರ ಅಧಿಕಾರಕ್ಕೆ ಬಂದನಂತರ ಈ ಅಕ್ರಮಗಳೆಲ್ಲ ಇನ್ನಷ್ಟು ಹೆಚ್ಚಾಗಿವೆ. ಅಕ್ಟೋಬರ್ 1977 ರಷ್ಟು ಹಿಂದೆಯೇ ಇಲ್ಲಿನ ಕಾರ್ಮಿಕರು ತಮ್ಮ ಕನಿಷ್ಟ ವೇತನ ರೂ. 350 ರಷ್ಟಾಗಬೇಕೆಂದು ಬೇಡಿಕೆ ಮುಂದಿಟ್ಟಾಗ ಸರಕಾರವು ಮಾಲೀಕರ ಪರ ಹಸ್ತಕ್ಷೇಪ ನಡೆಸಿ ಕನಿಷ್ಟ ವೇತನವನ್ನು ರೂ. 250ಕ್ಕೆ ಏಕಪಕ್ಷೀಯವಾಗಿ ನಿಗದಿಮಾಡಿತು. ಹಲವಾರು ಕೈಗಾರಿಕೆಗಳಲ್ಲಿ ಈ ಕನಿಷ್ಟ ವೇತನವನ್ನೂ ಕೊಡಲಾಗುತ್ತಿಲ್ಲ. ಕೆಲವೆಡೆ ಇದು ಕೇವಲ ರೂ. 100 ರಿಂದ 150 ಮಾತ್ರ ಇದೆ.

ಸಿ.ಐ.ಟಿ ಯು. ಈ ಎಲ್ಲ ಆಕ್ರಮಣಗಳ ವಿರುದ್ಧ ಸಂಯುಕ್ತ ಹೋರಾಟ ನಡೆಸುವ ಉದ್ದೇಶದಿಂದ ಎಲ್ಲಾ ಯೂನಿಯನ್‌ಗಳನ್ನೂ ಕ್ರಿಯಾ ಸಮಿತಿಯೊಂದರ ಆಶ್ರಯದಲ್ಲಿ ಸಂಘಟಿಸಿತು. ಬಿ.ಎಂ. ಎಸ್. ಮತ್ತು 'ಇಂಟಕ್'ನ ಒಂದು ವಿಭಾಗವನ್ನು ಹೊರತುಪಡಿಸಿ ಉಳಿದ ಎಲ್ಲಾ ಕಾರ್ಮಿಕ ಸಂಘಗಳೂ ಕ್ರಿಯಾ ಸಮಿತಿಯನ್ನು ಸೇರಿವೆ. ಸಪ್ಟೆಂಬರ್ 21 ರಂದು ಕ್ರಿಯಾ ಸಮಿತಿಯ ಆಶ್ರಯದಲ್ಲಿ ಜರಗಿಸಲಾದ ಕಾರ್ಮಿಕರ ಬೃಹತ್ ಸಭೆಯನ್ನುದ್ದೇಶಿಸಿ ಸಿ.ಪಿ. ಐ. (ಎಂ)ನ ಪೊಲಿಟ್‌ಬ್ಯೂರೋ ಸದಸ್ಯ ಕಾಂ. ಸಮರ ಮುಖರ್ಜಿ ಮಾತನಾಡಿದರು. ಈ ಸಭೆಯಲ್ಲಿ ಅಕ್ಟೋಬರ್ 6 ರಂದು ಫರಿದಾಬಾದ್ ಬಂದ್ ಆಚರಿಸುವ ನಿರ್ಧಾರವನ್ನೂ ಕೈಗೊಳ್ಳಲಾಯಿತು. ಇದಕ್ಕಾಗಿ ಹದಿಮೂರು ಅಂಶಗಳನ್ನೊಳಗೊಂಡ ಬೇಡಿಕೆ ಪಟ್ಟಿಯೊಂದನ್ನು ಹರ್ಯಾನಾ ಸರಕಾರಕ್ಕೂ, ಸ್ಥಳೀಯ ಆಡಳಿತೆಗೂ ಒಪ್ಪಿಸಿ ಅವುಗಳ ಬಗ್ಗೆ ಬೇಗನೆ ಮಾತುಕತೆಗೆ ಆಮಂತ್ರಿಸುವಂತೆ ಕೇಳಿಕೊಳ್ಳಲಾಯಿತು. ಬೇಡಿಕೆಗಳಲ್ಲಿ ಸೆಕ್ಷನ್ 144ನ್ನು ಹಿಂತೆಗೆದುಕೊಳ್ಳಬೇಕು, ಪೋಲೀಸ್ ದಬ್ಬಾಳಿಕೆ ಕೊನೆಗೊಳ್ಳಬೇಕು, ಸುಳ್ಳು ಮೊಕದ್ದಮೆಗಳನ್ನು ಹಿಂತೆಗೆದುಕೊಳ್ಳಬೇಕು, ಲಾಕ್‌ಔಟ್ ರದ್ದತಿ, ಮ್ಯಾನೇಜ್‌ಮೆಂಟಿನ ಗೂಂಡಾಗಳನ್ನು ದಸ್ತಗಿರಿ ಮಾಡಬೇಕು, ಮತ್ತು ಕನಿಷ್ಟ ವೇತನ ರೂ. 350 ಆಗಬೇಕು. ಇವೇ ಮೊದಲಾದವು ಮುಖ್ಯವಾದವುಗಳು. ಆಡಳಿತ ವರ್ಗಕ್ಕೂ ಸರಕಾರಕ್ಕೂ ಇನ್ನೂ ಹೆಚ್ಚು ಕಾಲಾವಕಾಶ ನೀಡುವ ಉದ್ದೇಶದಿಂದ ಕ್ರಿಯಾ ಸಮಿತಿಯು ಬಂದ್ ಕಾರ್ಯಕ್ರಮವನ್ನು ಅಕ್ಟೋಬರ್ 6 ರಿಂದ ಅಕ್ಟೋಬರ್ 17ಕ್ಕೆ ಮುಂದುವರಿಸಿತು.

ಕೆಲಕಾಲದಿಂದ ಆಟೋಪಿನ್ಸ್ ಮತ್ತು ಅಮೇರಿಕನ್ ಯುನಿವರ್ಸಲ್ಸ್ ಕಾರ್ಖಾನೆಯ ಮಾಲೀಕರಾದ ಅವತಾರ್‌ಸಿಂಗ್ ಮತ್ತು ಕೆ. ಪಿ. ಸಿಂಗ್ ಹಾಗೂ ಈಸ್ಟ್ ಇಂಡಿಯಾ ಕಾರ್ಖಾನೆಯ ಮ್ಯಾನೇಜರ್ ವಿ.ಎಸ್. ಜೈನ್ ಎಂಬವರು ವೃತ್ತಿನಿರತ ಗೂಂಡಾಗಳನ್ನು ಸೇರಿಸಿಕೊಂಡು ಅವರ ನೆರವಿನಿಂದ ಬೇರೆಬೇರೆ ಕೈಗಾರಿಕೆಗಳಲ್ಲಿ ವಿರೋಧಿ ಯೂನಿಯನ್‌ಗಳನ್ನು ಕಟ್ಟಲಾರಂಭಿಸಿದ್ದರು. ಈ ಗೂಂಡಾಗುಂಪನ್ನು ಗೂಂಡಾವಾಹಿನಿ ಎಂದೇ ಕರೆಯಲಾಗುತ್ತಿದೆ. ಫರಿದಾಬಾದ್‌ನಲ್ಲಿ ಎಲ್ಲೇ ಮುಷ್ಕರ ಅಥವಾ ಹೋರಾಟ ನಡೆದರೂ ಈ ಗೂಂಡಾಗಳಿಂದ ನಡೆಸಲ್ಪಡುವ ಯೂನಿಯನ್‌ಗಳು ಅಲ್ಲಿ ಹಿಂಸಾಕೃತ್ಯಗಳನ್ನು ಪ್ರಚೋದಿಸಿ ಮುಷ್ಕರ ನಿರತ ಕಾರ್ಮಿಕರ ಹೆಸರಿಗೆ ಕಳಂಕವುಂಟುಮಾಡುತ್ತಿದ್ದರು.

ಈ ನಡುವೆ ಹರ್ಯಾನಾದ ಕಾರ್ಮಿಕ ಮಂತ್ರಿ ಮೆಹರ್‌ಸಿಂಗ್ ರಥಿ ಅಕ್ಟೋಬರ್ 13 ರಂದು ಫರಿದಾಬಾದ್‌ಗೆ ಬಂದು 'ಬಂದ್' ಕಾರ್ಯಕ್ರಮವನ್ನು ಹಿಂತೆಗೆದುಕೊಳ್ಳುವಂತೆಯೂ ಹಾಗೆ ಮಾಡಿಲ್ಲವಾದರೆ ಫರಿದಾಬಾದ್ ಪಟ್ಟಣವನ್ನು ಪೋಲೀಸ್ ಕ್ಯಾಂಪ್ ಆಗಿ ಪರಿವರ್ತಿಸಿ ಕಾರ್ಮಿಕರಿಗೆ 'ತನ್ನ ಜನರ ಮೂಲಕ ತಕ್ಕ ಪಾಠ ಕಲಿಸುವುದಾಗಿಯೂ ಬೆದರಿಸಿದರು. ಮುಂದೆ ನಡೆದ ಹತ್ಯಾಕಾಂಡಕ್ಕೆ ಸರಕಾರ, ಪೋಲೀಸರು ಮತ್ತು ಗೂಂಡಾಗಳ ಪಿತೂರಿಯೇ ಕಾರಣವೆನ್ನುವುದು ಇದರಿಂದ ಗೊತ್ತಾಗುತ್ತದೆ.

ಅಕ್ಟೋಬರ್ 15ರಂದು ಸುಮಾರು 20,000ಕ್ಕೂ ಮಿಕ್ಕಿದ ಕಾರ್ಮಿಕರು ಕ್ರಿಯಾ ಸಮಿತಿ ನೀಡಿದ ಕರೆಯ ಮೇರೆಗೆ ಶಾಂತ ಮೆರವಣಿಗೆ ನಡೆಸಿದರು. ಹಲವು ಗಂಟೆಗಳ ಕಾಲ ತೆಗೆದುಕೊಂಡ ಈ ಮೆರವಣಿಗೆ ಯಾವುದೇ ಅಹಿತಕರ ಘಟನೆಗೆ ಅವಕಾಶ ನೀಡಿರಲಿಲ್ಲ. ತಾ. 16 ಮತ್ತು 17 ಮಧ್ಯರಾತ್ರೆ ನಗರದಲ್ಲಿ ಸೆಕ್ಷನ್ 144 ನ್ನು ಸಾರಲಾಯಿತು. ಸಹಜವಾಗಿಯೇ ಇದು ಕಾರ್ಮಿಕರಿಗೆ ಮರುದಿನ ಮುಂಜಾನೆ ಮೆರವಣಿಗೆ ಹೊರಡುವವರೆಗೂ ಗೊತ್ತಾಗಿರಲಿಲ್ಲ. ಹಾಗಾಗಿ ಈ ಮೊದಲು ನೀಲಂ ಚೌಕದ ಬಳಿ ಸಭೆ ಜರಗಿಸುವುದೆಂದು ಕ್ರಿಯಾ ಸಮಿತಿ ನಿರ್ಧರಿಸಿದ್ದರೂ ಪೋಲೀಸರ ಜಾಲಕ್ಕೆ ಕಾರ್ಮಿಕರು ಬಲಿ ಬೀಳಬಾರದೆನ್ನುವ ಉದ್ದೇಶದಿಂದ ಮೆರವಣಿಗೆಯನ್ನು ರದ್ದುಪಡಿಸಿ ಅದರ ಬದಲಾಗಿ ಸೆಕ್ಷನ್ 144ನ್ನು ಜಾರಿಗೊಳಿಸಲಾದುದರ ವಿರುದ್ಧ ಪ್ರತಿಭಟಿಸಿ ಕಾರ್ಮಿಕರು ದಸ್ತಗಿರಿಯಾಗಬೇಕೆಂದೂ ಕ್ರಿಯಾ ಸಮಿತಿ ನಿರ್ಧರಿಸಿತು. ಆದರೆ ಪೋಲೀಸರು ಮತ್ತು ಗೂಂಡಾವಾಹಿನಿ ಬೇರೆಯೇ ವ್ಯೂಹ ರಚಿಸಿದ್ದರು. 17 ರಂದು ಬೆಳಿಗ್ಗೆ 9 ಗಂಟೆಗೆ ನೀಲಂ ಚೌಕದ ಬಳಿ ಮತ್ತು ರೈಲ್ವೇ ಸೇತುವೆಯ ಸಮೀಪ ಪೋಲೀಸರು ಕಾರ್ಮಿಕರ ಮೇಲೆ ಯಾವುದೇ ಪ್ರಚೋದನೆ ಇರದಿದ್ದರೂ ಗೋಲಿಬಾರು ನಡೆಸಿದರು. ಇದರಲ್ಲಿ ಹಲವು ಜನ ಸತ್ತು ಬಹಳ ಮಂದಿಗೆ ತೀವ್ರ ಗಾಯಗಳಾಗಿವೆ. ರಕ್ಷಣೆಗಾಗಿ ರೈಲ್ವೇ ಸೇತುವೆಯ ಕೆಳಗೆ ಮತ್ತು ಜೋಪಡಿಗಳಲ್ಲಿ ಆಶ್ರಯಪಡೆದ ಜನರ ಮೇಲೆ ಹೆಂಗಸರು ಮಕ್ಕಳೆನ್ನದೆ ಗುಂಡಿನ ಮಳೆಗರೆಯಲಾಯಿತು. ಗುಂಡಿನೇಟು ಮತ್ತು ಅಶ್ರುವಾಯುವಿನಿಂದ ಜನ ತಪ್ಪಿಸಿಕೊಳ್ಳದಂತೆ ಪೋಲೀಸರು ತಡೆಯೊಡ್ಡಿದರು. ಇದರಿಂದಾಗಿ ಕೆಲವರು ನದಿಗೆ ಧುಮುಕಬೇಕಾಯಿತು; ಇನ್ನೂ ಕೆಲವರನ್ನು ಸೇತುವೆಯ ಕೆಳಕ್ಕೆ ತಳ್ಳಲಾಯಿತು. ಈ ಪಾಶವೀ ಕೃತ್ಯ ಜರಗಿದ ಸ್ಥಳವನ್ನು ಸಂದರ್ಶಿಸಿದ ಸಿ. ಪಿ. ಐ. (ಎಂ) ರಾಜ್ಯಸಭಾ ಸದಸ್ಯ ಕಾಂ. ವಿಶ್ವನಾಥ ಮೆನನ್ ಅವರ ಬಳಿ ಪ್ರತ್ಯಕ್ಷದರ್ಶಿಗಳು ಹೇಳಿದ ಪ್ರಕಾರ ಗೂಂಡಾವಾಹಿನಿಯ ಜನ ಪೋಲೀಸರನ್ನು ಪ್ರಚೋದಿಸಿ ಗೋಲಿಬಾರು ನಡೆಸಬೇಕೆಂದೇ ಪೋಲೀಸ್ ಹೆಡ್‌ಕ್ವಾರ್ಟರ್ಸ್ ಬಳಿ ಒಂದು ಮೋಟಾರು ವಾಹನವನ್ನು ಸುಟ್ಟರು. ನೀಲಂ ಚೌಕದ ಬಳಿಯೂ ಒಂದು ವಾಹನವನ್ನು ಸುಡಲಾಯಿತು. ಇವೆಲ್ಲ ಪೋಲೀಸರ ಜೊತೆ ಪಿತೂರಿ ನಡೆಸಿಯೇ ಆಯಿತೆನ್ನಲಾಗಿದೆ.

ಪೋಲೀಸರ ರಕ್ತ ಪಿಪಾಸೆ ಇಲ್ಲಿಗೇ ನಿಲ್ಲಲಿಲ್ಲ. ಅವರು ಗೂಂಡಾವಾಹಿನಿಯ ಜತೆಗೂಡಿ ಪ್ರೆಸ್‌ಕಾಲನಿ ಮತ್ತು ವಿ. ಎಸ್. ಜೈನ್ ಅವರ ಈಸ್ಟ್ ಇಂಡಿಯಾ ಕಾಟನ್ ಮಿಲ್ಸ್ ಬಳಿಯ ಪಂಜಾಬಿ ಕಾಲನಿಯಲ್ಲಿ ಮತ್ತೊಂದು ಹತ್ಯಾಕಾಂಡ ನಡೆಸಿದರು. ಕಾಂ. ವಿಶ್ವನಾಥ್‌ಮೆನನ್ ಅವರಿಗೆ ಪ್ರತ್ಯಕ್ಷದರ್ಶಿಗಳು ದ ಹೇಳಿಕೆಯಂತೆ ಮಾರಕ ಆಯುಧಗಳನ್ನು ಹೊಂದಿದ್ದ ನೂರಾರು ಗೂಂಡಾಗಳು ಮುಖಕ್ಕೆ ಮುಸುಕು ಹಾಕಿಕೊಂಡು ಈಸ್ಟ್ ಇಂಡಿಯಾ ಮಿಲ್ಲಿನಿಂದ ಹೊರಬಂದು ಪೋಲೀಸರ ಜೊತೆ ಸಾಗಿದರು. ಅವರು ಅದೇ ತಾನೆ ಅಲ್ಲಿಗೆ ಬರುತ್ತಿದ್ದ ಕಾರ್ಮಿಕರ ಮೆರವಣಿಗೆಯೊಂದರ ಮೇಲೆ ಆಕ್ರಮಣ ನಡೆಸಿ ಸಮೀಪದಲ್ಲೇ ಬರುತ್ತಿದ್ದ ಕಲ್ಲು ತುಂಬಿದ ಟ್ರಕ್ಕಿನಿಂದ ಕಲ್ಲುಗಳನ್ನು ಮೆರವಣಿಗೆಗಾರರ ಮೇಲೆ ಎಸೆಯಲಾರಂಭಿಸಿದರು. ಕಾರ್ಮಿಕರು ಇದನ್ನು ಪ್ರತಿಭಟಿಸಲು ಪ್ರಯತ್ನಿಸಿದಾಗ ಪೋಲೀಸರು ಗೋಲಿಬಾರು ನಡೆಸಿದರು. ಹಿಂದಕ್ಕೆ ಓಡಿಹೋಗುತ್ತಿದ್ದ ಕಾರ್ಮಿಕರನ್ನು ಅಟ್ಟಿಸಿಕೊಂಡು ಹೋಗಿ ಗೂಂಡಾಗಳು ಥಳಿಸಲಾರಂಭಿಸಿದರು. ಮನೆಗಳ ತಾರಸಿಗಳ ಮೇಲೆ ನಿಂತಿದ್ದ ಜನರ ಮೇಲೂ ಒಂದೇ ಸಮನೆ ಗುಂಡು ಮತ್ತು ಕಲ್ಲಿನ ಮಳೆಗರೆಯಲಾಯಿತು. ಪೋಲೀಸರ ಗುಂಡೇಟಿನಿಂದಾಗಿ ಒಬ್ಬ ಸರಕಾರಿ ಪ್ರೆಸ್ ಕಾರ್ಮಿಕ ಅಸುನೀಗಿದ್ದಾನೆ. ಅವನ ಹನ್ನೆರಡು ವರ್ಷ ಪ್ರಾಯದ ಮಗನಿಗೂ ಗುಂಡೇಟು ತಗಲಿದೆ. ಪಕ್ಕದ ಮನೆಯಲ್ಲಿದ್ದ ಇನ್ನೊಬ್ಬ ಕಾರ್ಮಿಕನೂ ಗುಂಡೇಟು ತಗಲಿ ಸತ್ತಿದ್ದಾನೆ. 16 ಹರೆಯದ ಬಾಲಕನೊಬ್ಬನಿಗೆ ಗಂಭೀರ ಸ್ವರೂಪದ ಗಾಯಗಳಾಗಿವೆ.

ಇಷ್ಟಕ್ಕೇ ತೃಪ್ತಿಪಡದ ಗೂಂಡಾಗಳು ಪ್ರೆಸ್ ಕಾಲನಿಯಲ್ಲಿನ ಮನೆಗಳನ್ನು ಪ್ರವೇಶಿಸಿ ಜನಗಳನ್ನು ಥಳಿಸಿದರು; ಹೆಂಗಸರ ಮೇಲೂ ಅತ್ಯಾಚಾರ ನಡೆಸಲಾಯಿತು. ಮನೆಯಲ್ಲಿದ್ದುದನ್ನೆಲ್ಲ ದೋಚಲಾಯಿತು. ಸೆಕ್ಟರ್ 23 ರಲ್ಲಿ ಒಬ್ಬ ಸಿಖ್ ಬಾಲಕನನ್ನು ಹೊಡೆದು ಕೊಲ್ಲಲಾಯಿತು. ಈ ಮಧ್ಯೆ ಪೋಲೀಸರೂ ಗೂಂಡಾಗಳೂ ಮಿಲ್ಲಿನ ಒಳಗೆ ಜೀಪೊಂದನ್ನು ಸುಟ್ಟು ಕಾರ್ಮಿಕರೆಲ್ಲ ಚದುರಿ ಗಂಟೆಗಳಾದ ಮೇಲೆ ಅದನ್ನು ಹೊರತಂದರು. ಗೋಲಿಬಾರು ನಡೆಸಲು ಜೀಪ್ ಸುಡಲಾದುದೇ ಕಾರಣವೆನ್ನಲು ಹೀಗೆ ಮಾಡಲಾಯಿತು.

ಅಕ್ಟೋಬರ್ 17 ರಂದು ಸಿ. ಐ. ಟಿ. ಯು. ಕೇಂದ್ರ ಕಚೇರಿಗೆ ಈಭೀಕರ ಹತ್ಯಾಕಾಂಡದ ವಾರ್ತೆ ಬಂದ ಬಳಿಕ ಫರಿದಾಬಾದನ್ನು ಸಂದರ್ಶಿಸಬಯಸಿದ ಸಿ. ಐ. ಟಿ. ಯು. ಕಾರ್ಯದರ್ಶಿ ನೃಸಿಂಗ್ ಚಕ್ರವರ್ತಿ ಮತ್ತಿತರ ಮುಂದಾಳುಗಳಿಗೆ ಪೋಲೀಸರು ಫರಿದಾಬಾದ್ ಪ್ರವೇಶಿಸಲು ಅನುಮತಿ ಕೊಡಲಿಲ್ಲ. ಅವರಿಗೆ ಮರುದಿನ ಮಾತ್ರವೇ ಹೋಗಲು ಸಾಧ್ಯವಾಯಿತು. ಗುಂಡಿನೇಟು, ಕಲ್ಲೇಟು ಮತ್ತು ಗೂಂಡಾವಾಹಿನಿಯ ಅತ್ಯಾಚಾರಗಳಿಂದಾಗಿ ಸತ್ತವರ ಸಂಖ್ಯೆ ಸರಕಾರೀ ಅಧಿಕೃತ ಸಂಖ್ಯೆಗಿಂತ ತುಂಬಾ ಹೆಚ್ಚಾಗಿದೆಯೆನ್ನಲಾಗಿದೆ.

ಈ ಭೀಕರ ಹತ್ಯಾಕಾಂಡದ ಬಗ್ಗೆ ಕೂಡಲೇ ನ್ಯಾಯಾಂಗ ತನಿಖೆಯಾಗಬೇಕೆಂದೂ ಗಾಯಗೊಂಡವರ ಮತ್ತು ಮೃತರ ಕುಟುಂಬಕ್ಕೆ ತಕ್ಕ ಪರಿಹಾರ ನೀಡಬೇಕೆಂದೂ, ದುಷ್ಕೃತ್ಯಕ್ಕೆ ಕಾರಣರಾದ ಪೋಲೀಸ್ ಅಧಿಕಾರಿಗಳ ಮೇಲೂ, ಗೂಂಡಾಗಳ ಮೇಲೂ ಸೂಕ್ತಕ್ರಮಕ್ಕೆಗೊಳ್ಳಬೇಕೆಂದೂ ಸಿ. ಐ. ಟಿ. ಯು. ಅಧ್ಯಕ್ಷ ಕಾಂ. ಬಿ. ಟಿ. ರಣದಿವೆ ಒತ್ತಾಯಿಸಿದ್ದಾರೆ. ಭಜನ್‌ಲಾಲ್ ಸರಕಾರದ ಕಾರ್ಮಿಕವಿರೋಧಿ ನೀತಿಯನ್ನು ಪ್ರತಿಭಟಿಸಿ ಹೋರಾಟ ಮುಂದುವರಿಸಬೇಕೆಂದೂ ಸಿ. ಐ. ಟಿ. ಯು. ಮುಂದಾಳುಗಳು ಕಾರ್ಮಿಕರಿಗೆ ಕರೆ ನೀಡಿದ್ದಾರೆ. ●

ಯುವಕ ಮಂಡಲದ ಪದಾಧಿಕಾರಿಗಳ ಆಯ್ಕೆ

ದ. ಕ. ಜಿಲ್ಲಾ ಕುಂದಾಪುರ ತಾಲ್ಲೂಕು ಕೋಟೇಶ್ವರ ಯುವಕ ಮಂಡಲದ ವಿಸ್ತೃತ ಸಭೆಯು ಅಕ್ಟೋಬರ್ 30 ರಂದು ತಾಲ್ಲೂಕು ಯುವಕ ಸಮಿತಿಯ ಅಧ್ಯಕ್ಷ ಕಾಂ. ಕೋಣಿ ವೆಂಕಟೇಶರವರ ಅಧ್ಯಕ್ಷತೆಯಲ್ಲಿ ಜರುಗಿತು.

ಸಭೆಯನ್ನುದ್ದೇಶಿಸಿ ಕೋಟೇಶ್ವರ ಗ್ರಾಮ ಪಂಚಾಯತಿ ಉಪಾಧ್ಯಕ್ಷ ಕಾಂ. ದಾಸ ಭಂಡಾರಿ, ತಾಲ್ಲೂಕು ಎಸ್. ಎಫ್. ಐ. ಕಾರ್ಯದರ್ಶಿ ಕಾಂ. ಆರ್. ಜಯಕುಮಾರ್, ಗೋವಿಂದ ಸೆಟ್ಟಿಗಾರ್, ಗೋಪಾಲ ಸೆಟ್ಟಿಗಾರ್, ಕೆ. ಶಂಕರ್ ಮೊದಲಾದವರು ಮಾತನಾಡಿದರು.

15 ಜನ ಸದಸ್ಯರಿರುವ ಕಾರ್ಯಕಾರೀ ಸಮಿತಿಯನ್ನು ರಚಿಸಿ ಕಾಂ. ಗಣಪು ಬಂಗೇರರವರನ್ನು ಕಾರ್ಯದರ್ಶಿಯನ್ನಾಗಿ ಆಯ್ಕೆ ಮಾಡಲಾಯಿತು.

○

ಹರಿಜನರ ಮೇಲೆ ದಬ್ಬಾಳಿಕೆ - ಬಹಿಷ್ಕಾರ

ಕೋಲಾರ ಜಿಲ್ಲಾ ಶಿಡ್ಲಘಟ್ಟ ತಾಲ್ಲೂಕು ತಲದುಮ್ಮನ ಹಳ್ಳಿಯಲ್ಲಿ ಗ್ರಾಮದ ಪಟ್ಟಭದ್ರ ಹಿತಾಸಕ್ತಿಗಳಾದ ಶ್ರೀಮಂತರು, ಸವರ್ಣೀಯರು ಅಲ್ಲಿನ ಹರಿಜನರನ್ನು ಕೂಲಿಗೆ ಕರೆಯದೆ, ಊರೊಳಗೆ ತಿರುಗಾಡಲು ಬಿಡದೆ, ದೇವಾಲಯಕ್ಕೆ ಸೇರಿಸದೆ, ಅಂಗಡಿಗಳಲ್ಲಿ ದಿನಸಿಗಳನ್ನು ಪಡೆಯಲು ಅಡ್ಡಿಪಡಿಸಿ, ಬಾವಿಗಳಿಂದ ನೀರು ಪಡೆಯಲು ಅವಕಾಶ ನೀಡದೆ ಅವರ ಮೇಲೆ ಸಾಮಾಜಿಕ ಬಹಿಷ್ಕಾರ ವಿಧಿಸಿರುವುದು ಶೋಚನೀಯ.

ಈ ಬಗ್ಗೆ ಸಿ. ಪಿ. ಐ. (ಎಂ) ತಾಲ್ಲೂಕು ಕಮಿಟಿ ಕಾರ್ಯದರ್ಶಿ ಕಾಂ. ಜೆ. ದೊರೆಸ್ವಾಮಿ, ಕಾಂ. ಆರ್. ಮುನಿಯಪ್ಪ, ಕಾಂ. ಸಯ್ಯದ್‌ರಫಿಉದ್ದೀನ್ ಕಾಂ. ಪಿ. ಎಸ್. ವೆಂಕಟರಮಣರೆಡ್ಡಿಯವರು ತಾ. 28-10-79ರಲ್ಲಿ ತಲದುಮ್ಮನ ಹಳ್ಳಿಗೆ ಹೋಗಿ ಹರಿಜನರು ಅನುಭವಿಸುತ್ತಿರುವ ಸಂಕಷ್ಟಗಳನ್ನು ಖುದ್ದು ನೋಡಿ ವಿಚಾರಿಸಿ ವಾಸ್ತವಾಂಶಗಳನ್ನು ಅಧ್ಯಯನ ಮಾಡಿರುತ್ತಾರೆ.

ಇದಕ್ಕೆಲ್ಲಾ ಕಾರಣ, 40 ಎಕರೆ ಜಮೀನನ್ನು ಸರ್ಕಾರವು ಈ ಹರಿಜನರಿಗೆ ದರಖಾಸ್ತು ಮೂಲಕ ಮಂಜೂರು ಮಾಡಿದ್ದು, ಈ ಜಮೀನಿನಲ್ಲಿ ಇಲ್ಲಿನ ಶ್ರೀಮಂತ ರೈತರು ಅಕ್ರಮವಾಗಿ ಪ್ರವೇಶಮಾಡಿದ್ದು, ಸದರಿ ಜಮೀನಿನ ಬಗ್ಗೆ ಮೊಕದ್ದಮೆ ನಡೆಯುತ್ತಿರುತ್ತೆ. ಈ ದ್ವೇಷದಿಂದಾಗಿ ಹರಿಜನರಿಗೆ ಸಾಮಾಜಿಕ ಬಹಿಷ್ಕಾರ ಹಾಕಿದ್ದಲ್ಲದೆ, ಸುತ್ತಮುತ್ತಲಿನ ಹಳ್ಳಿಗಳಲ್ಲೂ ಹರಿಜನರನ್ನು ಕೂಲಿಗೆ ಕರೆಯುವುದನ್ನು ತಡೆಹಿಡಿಯಲಾಗಿದೆ.

ಈ ಗ್ರಾಮದಲ್ಲಿ ವರ್ಷವರ್ಷವೂ ವಿಜಯದಶಮಿ ದಿನದಂದು ಹರಿಜನರು ದೇವರ ಉತ್ಸವ ಮಾಡುತ್ತಾರೆ. ಸವರ್ಣೀಯರು ಪ್ರತ್ಯೇಕವಾಗಿ ಉತ್ಸವ ಮಾಡುತ್ತಾರೆ. ಆದರೆ ಈ ವರ್ಷದ ವಿಜಯದಶಮಿಯಂದು ಹರಿಜನರು ಮಾಮೂಲಿಯಾಗಿ ಮಾಡುತ್ತಿದ್ದ ಉತ್ಸವವನ್ನು ತಾತ್ಕಾಲಿಕವಾಗಿ ನಿಲ್ಲಿಸಿದ್ದು, ಸವರ್ಣೀಯರು ಮಾತ್ರ ಉತ್ಸವ ನಡೆಸಿದ್ದಾರೆ. ನಂತರ ತಾ. 10-10-79 ರಂದು ಹರಿಜನರು ತಮ್ಮ ದೇವರ ಉತ್ಸವವನ್ನು ಮಾಡುತ್ತಿರುವ ಸಂದರ್ಭದಲ್ಲಿ ಶ್ರೀಮಂತ ರೈತರು ಹರಿಜನರ ಮನೆಗಳ ಮೇಲೆ ಕಲ್ಲುಗಳನ್ನು ಹಾಕಿದ್ದು ಕೆಲವು ಮನೆಗಳ ಹಂಚುಗಳು ಒಡೆಯಲಾಗಿದೆ. ಈ ಬಗ್ಗೆ ಹರಿಜನರು ಪೋಲೀಸ್‌ಕಂಪ್ಲೆಂಟ್ ಮಾಡಿದ್ದು ಪೋಲೀಸ್ ಸರ್ಕಲ್ ಇನ್ಸ್‌ಪೆಕ್ಟರ್ ಸ್ಥಳವೀಕ್ಷಣೆ ಮಾಡಿ ಕ್ರಮವಹಿಸುವ ಸಂದರ್ಭದಲ್ಲಿ ಹರಿಜನ, ಗಿರಿಜನರ ಉದ್ಧಾರ ಮಾಡುತ್ತೇವೆಂದು ಹಗಲಿರುಳು ಬೊಬ್ಬೆ ಇಡುತ್ತಿರುವ ಇಂದಿರಾ ಕಾಂಗ್ರೆಸ್‌ನ ಮುಖಂಡರು ಮಧ್ಯೆ ಪ್ರವೇಶಮಾಡಿ ಕ್ರಮವಹಿಸಬೇಡಿ! ನಾವು ಗ್ರಾಮದಲ್ಲಿ21-10-79 ರಲ್ಲಿ ಪಂಚಾಯತಿ ಮಾಡಿ ರಾಜಿಮಾಡ್ಸಿ ಅನ್ಯೋನ್ಯವಾಗಿರುವಂತೆ ವ್ಯವಸ್ಥೆ ಮಾಡುತ್ತೇವೆಂದು ಅಧಿಕಾರಿಗಳಲ್ಲಿ ತಮ್ಮ ಪ್ರಭಾವ ಬೀರಿ ಕ್ರಮವಹಿಸದಂತೆ ಮಾಡಿದರು. ಆದರೂ ಈವರೆವಿಗೂ ಪಂಚಾಯ್ತಿಮಾಡಿ ಹರಿಜನರಿಗೆ ಕಿರುಕುಳ ತಪ್ಪಿಸಲಿಲ್ಲ. ಇಂದೂ ಅಲ್ಲಿನ ಹರಿಜನರು ಕೂಲಿ ದೊರೆಯದೆ ಅಂಗಡಿಯಲ್ಲಿ ದಿನಸಿಗಳು ಪಡೆಯಲು ಸಾಧ್ಯವಿಲ್ಲದೆ, ನೀರು ಇಲ್ಲದೆ ಅನೇಕ ವಿಧದ ತೊಂದರೆಗಳಿಗೆ ಈಡಾಗಿರುತ್ತಾರೆ.

ಈಗಲಾದರು ಸಂಬಂಧಪಟ್ಟ ಅಧಿಕಾರಿಗಳು ಈ ವಿಚಾರದಲ್ಲಿ ತಕ್ಷಣ ಗಮನ ಹರಿಸಿ ತಪ್ಪಿತಸ್ಥರ ಮೇಲೆ ತುರ್ತಿನ ಕ್ರಮವಹಿಸಿ ಹರಿಜನರಿಗೆ ರಕ್ಷಣೆ ನೀಡಬೇಕಾಗಿ ಸಿ.ಪಿ.ಐ. (ಎಂ) ತಾಲ್ಲೂಕು ಸಮಿತಿ ಒತ್ತಾಯಿಸುತ್ತದೆ.

○

ಭಾರತದ ಬಡ ಮಕ್ಕಳು

[3ನೇ ಪುಟದಿಂದ]

ದಾನಕ್ಕೆ ಸಂಪೂರ್ಣ ತೆರಿಗೆ ವಿನಾಯಿತಿ ನೀಡಲಾಗಿದೆ.

* ಅಂತರಾಷ್ಟ್ರೀಯ ಮಕ್ಕಳ ವರ್ಷದಲ್ಲಿ ಸರಕಾರವು ಮಕ್ಕಳ ಕ್ಷೇಮಾಭಿವೃದ್ಧಿಗೆ ಯಾವ ಹೊಸ ಕಾಯಿದೆಯನ್ನೂ ಜಾರಿಗೆ ತರಲಿಲ್ಲ. ನಿರ್ಗತಿಕ, ಮನೆಮಾರು ಕಳೆದುಕೊಂಡ, ತಂದೆ ತಾಯಿ ಇಲ್ಲದೆ ಬೀದಿ ಪಾಲಾದ, ವಿವಾಹೇತರ ಸಂಬಂಧಗಳಿಂದ ಜನಿಸಿದ ಮಕ್ಕಳನ್ನು ದತ್ತಕ್ಕೆ ತೆಗೆದುಕೊಳ್ಳುವ ಯಾವ ಕಾಯಿದೆಯನ್ನಾಗಲೀ ಕ್ರಮವನ್ನಾಗಲೀ ಕೈಗೊಳ್ಳಲಿಲ್ಲ. ಅಂತರಾಷ್ಟ್ರೀಯ ಸಂಸ್ಥೆಯ ಆರ್ಥಿಕ ಮತ್ತು ಸಾಮಾಜಿಕ ಮಂಡಳಿಯು (UNESCO) ಸೂಚಿಸಿದ ಯಾವ ಕಲ್ಯಾಣ ಯೋಜನೆಯನ್ನೂ ಮಕ್ಕಳಿಗಾಗಿ ಭಾರತದ ಘನ ಸರಕಾರವು ಕೈಗೊಳ್ಳಲಿಲ್ಲ. ಕೆಲಸಗಾರ ಮಕ್ಕಳ ಕೂಲಿ, ಕೆಲಸದ ಅವಧಿ, ಶಿಕ್ಷಣ, ಆರೋಗ್ಯ, ಮುಂತಾದವುಗಳ ಕುರಿತು ಸರಕಾರ ಯಾವ ಹೊಸ ಕಾನೂನು ಕಾರ್ಯಕ್ರಮಗಳನ್ನೂ ಕೈಕೊಳ್ಳಲಿಲ್ಲ.

ಮಕ್ಕಳ ಲಾಲನೆಪಾಲನೆ, ಶಿಕ್ಷಣ, ಆರೋಗ್ಯ (ಇಂಡಿಯನ್ ಎಕ್ಸ್‌ಪ್ರೆಸ್: 24-9-79) ಇತ್ಯಾದಿಗಳು ಅವುಗಳ ಕುಟುಂಬಗಳ ಖಾಸಗೀ ಹೊಣೆಗಾರಿಕೆ ಎಂದು ಎಲ್ಲಿಯವರೆಗೆ ನಮ್ಮ ದೇಶದ ಬಂಡವಾಳಶಾಹಿ ಭೂಮಾಲಕ ಸಮಾಜದಲ್ಲಿ ತಿಳಿಯಲಾಗುವುದೋ, ಅಲ್ಲಿಯವರೆಗೆ ಮಕ್ಕಳ, ಮಹಿಳೆಯರ, ಶ್ರಮಿಕ ವರ್ಗದ ಹಾಗೂ ವಿದ್ಯಾರ್ಥಿ ಯುವಜನರ ಸಮಸ್ಯೆಗಳು ಸಮರ್ಪಕವಾಗಿ ಬಗೆಹರಿಯಲಾರವು. 30 ವರ್ಷಗಳ ಕಾಂಗ್ರೆಸ್ ಮತ್ತು 30 ತಿಂಗಳುಗಳ ಜನತಾ ಆಳ್ವಿಕೆಯಿಂದ ಇದು ಸ್ಪಷ್ಟವಾಗಿದೆ.

○

ಬೆಂಗಳೂರು ವಿ. ವಿ. ವಿದ್ಯಾರ್ಥಿ ಮುಷ್ಕರಕ್ಕೆ ಎಸ್. ಎಫ್. ಐ. ನ ಬೆಂಬಲ

ಉಪಕುಲಪತಿ ಟಿ.ಆರ್. ಜಯರಾಮನ್ ಅವರನ್ನು ವಜಾ ಮಾಡುವಂತೆ ಒತ್ತಾಯಿಸಿ ಬೆಂಗಳೂರು ವಿ.ವಿ. "ವಿದ್ಯಾರ್ಥಿ ಕ್ರಿಯಾಸಮಿತಿ" ನಡೆಸುತ್ತಿರುವ ಹೋರಾಟಕ್ಕೆ ಭಾರತ ವಿದ್ಯಾರ್ಥಿ ಫೆಡರೇಶನ್ ಬೆಂಗಳೂರು ಜಿಲ್ಲಾ ಸಮಿತಿಯು ಸಂಪೂರ್ಣ ಬೆಂಬಲವನ್ನು ವ್ಯಕ್ತಪಡಿಸಿದೆ. ಈ ಹಿಂದೆಯೂ ಎಸ್. ಎಫ್. ಐ. ಮೊಟ್ಟಮೊದಲ ಬಾರಿಗೆ ಬೆಂಗಳೂರು ವಿ.ವಿ. ಉಪಕುಲಪತಿಗಳ ಬಗ್ಗೆ 22 ಆರೋಪಗಳನ್ನು ಇಟ್ಟು ಹೋರಾಟವನ್ನು ಪ್ರಾರಂಭಿಸಿತ್ತು. ಈಗ ಈ ಹೋರಾಟವು ಮುಂದುವರೆದಿರುವುದು ಹರ್ಷದಾಯಕವಾಗಿದೆ.

ಈ ಉಪಕುಲಪತಿಗಳ ಮೇಲೆ, ಬೆಂಗಳೂರು ವಿ. ವಿ. ಹಗರಣಗಳ ಬಗ್ಗೆ ಪತ್ರಿಕೆಗಳಲ್ಲಿ ವರದಿಯಾಗದ ದಿನವೇ ಇಲ್ಲ. "ಸರಕಾರದ ಕೆಲಸ ಕೇವಲ ಧನ ಸಹಾಯ ಮಾಡುವುದು ಮಾತ್ರ,ನನ್ನನ್ನು ಪ್ರಶ್ನಿಸುವುದಲ್ಲವೆಂದು" ವಿದ್ಯಾರ್ಥಿಗಳಿಗೆ ಬಹಿರಂಗವಾಗಿ ಹೇಳುವ ಬಂಡತನ ಈ ಉಪಕುಲಪತಿಗಳದು. ಪ್ರಪಂಚದ ಯಾವ ವಿ. ವಿ. ಕ್ಯಾಂಪಸ್ಸಿನಲ್ಲೂ ಪೋಲೀಸ್ ಠಾಣೆ ಇಲ್ಲದಿರುವಾಗ, ಬೆಂಗಳೂರಿನ ಜ್ಞಾನಭಾರತಿಯಲ್ಲಿ ಪೋಲೀಸ್‌ಠಾಣೆ ಹಾಕಿಸಿ ಸರ್ವಾಧಿಕಾರ ನಡೆಸುತ್ತಿದ್ದಾರೆ.ದೋಷದಿಂದ ಕೂಡಿದ 4000 ಮಾರ್ಕ್ಸ್ ಕಾರ್ಡುಗಳು ಈ ಉಪಕುಲಪತಿಗಳ ಅದಕ್ಷತೆಗೆ ಒಂದು ಜೀವಂತ ಸಾಕ್ಷಿ. ಹರಿಜನ, ಗಿರಿಜನ ಹಿಂದುಳಿದ ವರ್ಗಗಳ ಮೀಸಲಾತಿಯನ್ನು ಪ್ರಬಲವಾಗಿ ತಿರಸ್ಕರಿಸುವ ಈ ಉಪಕುಲಪತಿಗಳನ್ನು ಕೂಡಲೇ ವಜಾಮಾಡಬೇಕು, ವಿದ್ಯಾರ್ಥಿಗಳ ಬೇಡಿಕೆಗಳು ಈಡೇರಲು ಬೆಂಗಳೂರು ವಿ. ವಿ. ವಿದ್ಯಾರ್ಥಿಗಳು ಒಂದಾಗಬೇಕು, ಅನ್ಯಾಯವನ್ನು ಪ್ರತಿಭಟಿಸಬೇಕು, ವಿ.ವಿ.ಕ್ಕೆ ಸ್ವಚ್ಛ ಆಡಳಿತ ಬರಲು ವಿದ್ಯಾರ್ಥಿಗಳು ಹೋರಾಟ ಕಣಕ್ಕೆ ಇಳಿಯಬೇಕೆಂದು ಭಾರತ ವಿದ್ಯಾರ್ಥಿ ಫೆಡರೇಶನ್ ಬೆಂಗಳೂರು ಜಿಲ್ಲಾ ಸಮಿತಿ ಕಾರ್ಯದರ್ಶಿ ಕಾಂ. ಗೋಪಾಲಕೃಷ್ಣ ಹೇಳಿಕೆ ಇತ್ತಿರುವರು.

●

ಘೋಷಿತ ಉದ್ದೇಶ ಸಾಧನೆಗಾಗಿ

[4ನೇ ಪುಟದಿಂದ]

ಸಾಧಕ ನಿಲುಮೆಯೆಂದು ಘೋಷಿಸುತ್ತಿದ್ದಾರೆ. ತತ್ವಗಳನ್ನೂ ಅಂತಿಮವಾದ ಗುರಿಯನ್ನೂ ಸದ್ಯದ ಲಾಭಕ್ಕಾಗಿ ಬಲಿಕೊಡುವುದು ಮಾತ್ರವೇ ಸಂದರ್ಭಸಾಧಕತನ ಎನ್ನುವುದು ಸಿ. ಪಿ. ಐ. (ಎಂ)ಗೆ ಚೆನ್ನಾಗಿ ಗೊತ್ತು. ಬೂರ್ಜ್ವಾ ಪಕ್ಷಗಳು ಇದೀಗ ನಿರ್ಭಿಡೆಯಿಂದ ಅನುಸರಿಸುತ್ತಿರುವಂತಹ ಸಂದರ್ಭಸಾಧಕ ತಂತ್ರಗಳು ತನ್ನ ಬಳಿಗೆ ಸುಳಿಯದಂತೆ ನೋಡಿಕೊಳ್ಳುವುದು ಹೇಗೆಂದೂ ಸಿ. ಪಿ. ಐ. (ಎಂ)ಗೆ ಚೆನ್ನಾಗಿ ತಿಳಿದಿದೆ.

ಸಿ. ಪಿ. ಐ. (ಎಂ) ಅನುಸರಿಸುವ ಚುನಾವಣಾ ತಂತ್ರದ ಮುಖ್ಯ ಉದ್ದೇಶಗಳು ಇಷ್ಟೇ:- 1. ಕಾಂಗ್ರೆಸ್ (ಐ) ಪ್ರತಿನಿಧಿಸುತ್ತಿರುವಂತಹ ನಿರಂಕುಶಾಧಿಕಾರಿ ಶಕ್ತಿಗಳನ್ನೂ ಜನತಾಪಕ್ಷದೊಳಗೆ ಆಶ್ರಯ ಪಡೆದಿರುವ ಆರೆಸ್ಸೆಸ್-ಜನಸಂಘ ಕೋಮುವಾದಿ ಶಕ್ತಿಗಳನ್ನೂ ಸೋಲಿಸುವುದು. 2. ಈ ಅವಳಿ ಅಪಾಯಗಳ ವಿರುದ್ಧ ದೃಢ ಹೋರಾಟ ನೀಡುವುದಾಗಿ ಸಾರಿಕೊಂಡಿರುವ ಲೋಕದಳ-ಕಾಂಗ್ರೆಸ್ ಮೈತ್ರಿಕೂಟದ ವಿಜಯಕ್ಕೆ ನೆರವಾಗುವುದು. 3. ಜನಸಮುದಾಯದ ನಡುವೆಯೂ ಲೋಕಸಭೆಯಲ್ಲೂ ಎಡ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳ ಬಲವರ್ಧಿಸುವಂತೆ ಮಾಡುವುದು. ಮತ್ತು 4. ನಿರಂಕುಶಾಧಿಕಾರ ಮತ್ತು ಕೋಮುವಾದದ ವಿರುದ್ಧ ಸಿ. ಪಿ. ಐ. (ಎಂ) ತನ್ನ ತತ್ವನಿಷ್ಠ ಹೋರಾಟವನ್ನು ಮುಂದುವರಿಸಲು ಅನುಕೂಲವಾಗುವಂತೆ, ಎಡ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳ ಐಕ್ಯತೆಗಾಗಿ ನಡೆಯುವ ಚಳುವಳಿಯಲ್ಲಿ ಸಿ. ಪಿ. ಐ.(ಎಂ) ಮುಂದಾಳುತ್ವ ವಹಿಸುವಂತೆ, ಅಧಿಕಾರದಲ್ಲಿರಬಹುದಾದ ಯಾರೇ ಆದರೂ ಜನವಿರೋಧಿ ನೀತಿಗಳನ್ನೂ ಕಾರ್ಯಕ್ರಮಗಳನ್ನೂ ಅನುಸರಿಸಿದಾಗ ಅದನ್ನು ವಿರೋಧಿಸಿ ಜನಸಾಮಾನ್ಯರ ಹಿತರಕ್ಷಣೆ ಮಾಡಲು ಸಾಧ್ಯವಾಗುವಂತೆ ಲೋಕಸಭೆಯಲ್ಲಿ ಸಿ. ಪಿ. ಐ. (ಎಂ)ನ ಬಲ ಹೆಚ್ಚುವಂತೆ ಮಾಡುವುದು.

ನಿರಂಕುಶಾಧಿಕಾರಿ ಮತ್ತು ಕೋಮುವಾದವನ್ನು ಸಂಪೂರ್ಣ ಸೋಲಿಸುವುದು, ಕಾಂಗ್ರೆಸ್-ಲೋಕದಳ ಮೈತ್ರಿಕೂಟಕ್ಕೆ ವಿಜಯ ಸಾಧ್ಯವಾಗುವಂತೆ ಮಾಡುವುದು, ಮತ್ತು ಎಡ ಹಾಗೂ ಜನತಾಂತ್ರಿಕ ಶಕ್ತಿಗಳ ಪ್ರಾತಿನಿಧ್ಯ ಲೋಕಸಭೆಯಲ್ಲಿ ಹೆಚ್ಚುವಂತೆ ಮಾಡುವುದು ಇವು ದೇಶದ ಎಲ್ಲ ವಾಮಪಂಥೀಯ ಶಕ್ತಿಗಳ ಅಂಗೀಕೃತ ಧೋರಣೆಯಾಗಿದೆ ಎಂಬ ವಿಶ್ವಾಸ ನಮಗಿದೆ. ಎಲ್ಲಾ ಎಡ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳ ಒಂದುಗೂಡುವಿಕೆಯು ಕಾಂಗ್ರೆಸ್-ಲೋಕದಳ ಮೈತ್ರಿಕೂಟದಲ್ಲಿರಬಹುದಾದ ಒಡಕನ್ನು ದುರಸ್ತಿಮಾಡಿಸುವಲ್ಲಿ ಈ ಪಕ್ಷಗಳ ಸದಸ್ಯರ ಕೈಗಳನ್ನು ಬಲಪಡಿಸುವುದು ಮಾತ್ರವಲ್ಲ, ಅದು ಮುಂದಿನ ಚುನಾವಣೆಯಲ್ಲಿ ನಿರ್ಣಾಯಕ ಪಾತ್ರ ವಹಿಸಲಿದೆ ಮತ್ತು ಪ್ರಜಾಸತ್ತೆ ಹಾಗೂ ಪ್ರಗತಿಯ ಪಥದಲ್ಲಿ ದೇಶದ ಭವಿಷ್ಯವನ್ನು ನಿರೂಪಿಸುವಲ್ಲಿ ತೀರಾ ಸಹಕಾರಿಯಾಗಲಿದೆ.

●

ಮಣನಾಲ್ಕೂರಿನಲ್ಲಿ ರೈತ ಕಾರ್ಮಿಕರ ಸಭೆ

ದ. ಕ. ಜಿಲ್ಲಾ ಬಂಟ್ವಾಳ ತಾಲ್ಲೂಕಿನ ಮಣನಾಲ್ಕೂರು ಗ್ರಾಮದ ಕಕ್ಕುದ ಕಟ್ಟೆ ಎಂಬಲ್ಲಿ ರೈತ, ಕೃಷಿ ಕೂಲಿಗಾರರ ಮತ್ತು ಬೀಡಿಕಾರ್ಮಿಕರ ಸಭೆಯು ಶ್ರೀ ಪುತ್ತು ಪೂಜಾರಿಯವರ ಅಧ್ಯಕ್ಷತೆಯಲ್ಲಿ ತಾ. 28-10-1979 ರಂದು ಜರಗಿತು. ಪ್ರಾರಂಭದಲ್ಲಿ ಬಿ. ಕೂಸಪ್ಪಗಟ್ಟಿಯವರು ಸ್ವಾಗತಿಸಿದರು. ಬಳಿಕ ಬಂಟ್ವಾಳ ತಾಲ್ಲೂಕು ಬೀಡಿಕೆಲಸಗಾರರ ಸಂಘದ ಕಾರ್ಯದರ್ಶಿ ಕಾಂ. ಬಿ. ನಾರಾಯಣ, ಬಂಟ್ವಾಳ ತಾಲ್ಲೂಕು ರೈತಸಂಘದ ಕಾರ್ಯದರ್ಶಿ ಕಾಂ. ಬಿ. ಎಚ್. ಬಂಗೇರರು ಮಾತನಾಡಿ ರೈತರು, ಕೃಷಿಕೂಲಿಗಾರರು ಮತ್ತು ಬೀಡಿ ಮಜೂರರು ತಾಲ್ಲೂಕಿನಾದ್ಯಂತ ಸಂಘಟಿತರಾಗಬೇಕಾದ ಅವಶ್ಯಕತೆಯನ್ನು ವಿವರಿಸಿದರು. ನಮ್ಮ ದೇಶವನ್ನಾಳುವ ಗುತ್ತೇದಾರಿ ಬಂಡವಾಳಶಾಹಿಗಳ ಮತ್ತು ಜಮೀನ್‌ದಾರಿಗಳ ಕಪಿಮುಷ್ಠಿಯಿಂದ ರೈತರು, ಕಾರ್ಮಿಕರು ಹೊರಬರುದು, ರೈತಕಾರ್ಮಿಕ ನಾಯಕರನ್ನು ಪ್ರತಿನಿಧೀಕರಿಸುವ ಸಂಘಟನೆಯನ್ನು ಬಲಪಡಿಸಬೇಕೆಂದು ಜಿಲ್ಲಾ ಬೀಡಿ ವರ್ಕರ್ಸ್ ಫೆಡರೇಷನ್ನಿನ ನಾಯಕ ಕಾಂ. ರಂಗಪ್ಪ ಸಾಲಿಯಾನ್‌ರವರು ಕರೆ ನೀಡಿದರು. ಶ್ರೀ ಶೇಷ ಧನ್ಯವಾದ ಅರ್ಪಿಸಿದ ಬಳಿಕ ಸಭೆ ಮುಕ್ತಾಯವಾಯಿತು.

●

ಕಾರ್ಮಿಕರ ಅಕ್ರಮ ಬಂಧನ—
ಸಿ. ಐ. ಟಿ. ಯು. ಖಂಡನೆ

ದಿನಾಂಕ 31-10-79 ರಂದು ಕೊಡಗು ಜಿಲ್ಲೆಯ ಕುಟ್ಟದ ಉಣ್ಣಾಮಲ್ಲೈ ಎಸ್ಟೇಟಿನ 6 ಮಂದಿ ಕಾರ್ಮಿಕರನ್ನು ಪೋಲೀಸರು ಸುಳ್ಳು ಆರೋಪಗಳನ್ನು ಹೊರಿಸಿ ಅಕ್ರಮವಾಗಿ ಬಂಧಿಸಿದ್ದಾರೆ. ಅವರನ್ನು ನ್ಯಾಯಾಲಯ ಪೋಲೀಸ್ ಕಸ್ಟಡಿಗೆ ಒಪ್ಪಿಸಿದೆ.

ಈ ಬಂಧನವನ್ನು ಪ್ರತಿಭಟಿಸಿ ಬಂಧಿತರನ್ನು ಕೂಡಲೇ ಬಿಡುಗಡೆಗೊಳಿಸಬೇಕೆಂದು ದಿನಾಂಕ 1-11-79 ರಂದು ಮಧ್ಯಾಹ್ನ 2 ಗಂಟೆಗೆ ಸಿ.ಐ.ಟಿ.ಯು. ವಿನ ಆಶ್ರಯದಲ್ಲಿ ಯೂನಿಯನ್ನಿನ ಮುಖಂಡರೂ ಸೇರಿದಂತೆ ಸುಮಾರು 50 ಮಂದಿ ಸಿ.ಐ.ಟಿ.ಯು. ಕಾರ್ಯಕರ್ತರು ಶ್ರೀಮಂಗಲ ಪೋಲೀಸ್ ಠಾಣೆಯ ಮುಂದೆ ಶಾಂತಯುತವಾಗಿ ಧರಣಿ ಸತ್ಯಾಗ್ರಹ ನಡೆಸಿದಾಗ ಅವರನ್ನೂ ಸಹ ಪೋಲೀಸರು ಅಕ್ರಮವಾಗಿ ಬಂಧಿಸಿದ್ದಾರೆ.

ಬಂಧಿತರಾದವರಲ್ಲಿ ಹೆಚ್ಚಿನ ಸಂಖ್ಯೆಯ ಹೆಂಗಸರೂ, ಮಕ್ಕಳೂ ಸೇರಿದ್ದಾರೆ.

[ಕಡೆಯ ಪುಟ ನೋಡಿ]

ಸುಳ್ಯದಲ್ಲಿ ರೈತಕಾರ್ಮಿಕರಿಂದ ಭಾರಿ ಮೆರವಣಿಗೆ, ಸಭೆ

ಅಧಿಕ ಸಂಖ್ಯೆಯಲ್ಲಿ ಮಹಿಳೆಯರು ಮತ್ತು ದಲಿತರನ್ನೊಳಗೊಂಡ ಸುಮಾರು ಒಂದು ಸಹಸ್ರಕ್ಕಿಂತಲೂ ಹೆಚ್ಚು ಜನರಿದ್ದ ರೈತಕಾರ್ಮಿಕರ ಬೃಹತ್ ಮೆರವಣಿಗೆಯು ತಾ. 5 ರಂದು ದ. ಕ. ಜಿಲ್ಲೆಯ ಸುಳ್ಯದಲ್ಲಿ ಪೇಟೆಯ ಪ್ರಮುಖ ಬೀದಿಗಳನ್ನೆಲ್ಲಾ ಸುತ್ತಾಡಿ, ಸಂಜೆ 3 ಘಂಟೆಗೆ ತಾಲ್ಲೂಕು ಕಛೇರಿ ಎದುರು ಮತ ಪ್ರದರ್ಶನ ನಡೆಸಲಾಯ್ತು. ನವೆಂಬರ್ 21ರಂದು ದ. ಕ. ಜಿಲ್ಲೆಯ ರೈತ ಸಂಘದ ನೇತೃತ್ವದಲ್ಲಿ ಜಿಲ್ಲಾಧಿಕಾರಿಯವರ ಕಛೇರಿಯೆದುರುನಡೆಯಲಿರುವ ಬೃಹತ್ ಮತ ಪ್ರದರ್ಶನಕ್ಕೆ ಪೂರಕವಾಗಿ ಸುಳ್ಯದಲ್ಲಿ ಈ ಕಾರ್ಯಕ್ರಮವು ನಡೆಯಿತು 12ಬೇಡಿಕೆಗಳನ್ನೊಳಗೊಂಡ ಮನವಿಯೊಂದನ್ನು ತಹಸೀಲ್ದಾರರವರಿಗೆ ಕೊಟ್ಟು, ಅವರು ತನ್ನ ಅಧಿಕಾರದ ವ್ಯಾಪ್ತಿಯಲ್ಲಿರುವ ಬೇಡಿಕೆಗಳನ್ನು ಕೂಡಲೇ ಈಡೇರಿಸುವುದಾಗಿಯೂ, ಉಳಿದವುಗಳನ್ನು ಸಂಬಂಧಪಟ್ಟವರಿಗೆ ಕಳುಹಿಸಿಕೊಡುವುದಾಗಿಯೂ ಆಶ್ವಾಸನೆ ಇತ್ತ ಮೇಲೆ, ರೈತಕಾರ್ಮಿಕರು ಮೆರವಣಿಗೆಯ ಮೂಲಕ ಬಸ್‌ನಿಲ್ದಾಣದ ವಠಾರಕ್ಕೆ ತೆರಳಿ ಅಲ್ಲಿ ಬಹಿರಂಗ ಸಭೆ ನಡೆಸಿದರು.

ಸುಳ್ಯ ತಾಲ್ಲೂಕಿನ ಮತ್ತು ಸುಳ್ಯ ಮುನಿಸಿಪಾಲಿಟಿಯ ಒಳಗಡೆ ಇರುವ ಎಲ್ಲಾ ಸರಕಾರಿ ಭೂಮಿ ಮತ್ತು ಫಾರೆಸ್ಟ್ ಭೂಮಿಗಳಲ್ಲಿ ಅಗಮೆ ಮಾಡಿರುವವರಿಗೆ ದಂಡನೆ ಹೇರದೆ ದರ್ಖಾಸ್ತು ಖಾಯಂಗೊಳಿಸಬೇಕು; ಎಲ್ಲಾ ಭೂರಹಿತ ಹಾಗೂ ಹರಿಜನ ಗಿರಿಜನಕೃಷಿಕೂಲಿಗಾರರಿಗೆ ಮತ್ತು ರಬ್ಬರ್ ತೋಟಗಳಲ್ಲಿ ಕೆಲಸ ಮಾಡುವ ಸಿಲೋನ್ ನಿರ್ವಸತಿ ಕುಟುಂಬಗಳಿಗೆ ಎರಡು ಎಕರೆಗೆ ಕಡಿಮೆಯಾಗದಂತೆ ಸರಕಾರಿ ಭೂಮಿ ಒದಗಿಸಬೇಕು; ಟ್ರಿಬ್ಯೂನಲ್‌ಗಳಲ್ಲಿ ಬಾಕಿ ಉಳಿದಿರುವ ಗೇಣಿದಾರರ ಅರ್ಜಿಗಳನ್ನು ಕೂಡಲೇ ರೈತರ ಪರವಾಗಿ ತೀರ್ಮಾನಿಸುವುದು ಮತ್ತು ಟ್ರಿಬ್ಯೂನಲ್‌ಗಳಿಂದ ಭೂಮಿ ಕಳೆದುಕೊಂಡಿರುವ ರೈತರ ಕೇಸುಗಳನ್ನು ಪುನಃ ಪರಿಶೀಲಿಸಿ ಅವರಿಗೆ ಭೂಮಿ ಒದಗಿಸಬೇಕು; ಪರಿಹಾರವಿಲ್ಲದೆ ಗೇಣಿದಾರರಿಗೆ ಭೂಮಿಯ ಒಡೆತನ ನೀಡಬೇಕು; ಕೃಷಿಕೂಲಿಗಾರರಿಗೆ ಕನಿಷ್ಟ ವೇತನ ರೂ. 8 ನ್ನು ಸರಕಾರ ನಿಗದಿಗೊಳಿಸಬೇಕು ಮತ್ತು ಅವರು ವಾಸಿಸುವ ಮನೆಯನ್ನು ಅವರಿಗೆ ಖಾಯಂಗೊಳಿಸಬೇಕು; ರೈತರು ಬೆಳೆಸುವ ಬೆಳೆಗಳಿಗೆ ನ್ಯಾಯಬೆಲೆ ಸಿಗಬೇಕು; ಎಲ್ಲಾ ಅವಶ್ಯಕ ಸಾಮಗ್ರಿಗಳನ್ನು ಸರಕಾರ ನ್ಯಾಯಬೆಲೆ ಅಂಗಡಿಗಳ ಮೂಲಕ ಗ್ರಾಹಕರಿಗೆ ಒದಗಿಸಬೇಕು; ಡೀಸೆಲ್ ಮತ್ತು ಸೀಮೆ ಎಣ್ಣೆಯನ್ನು ರೈತರಿಗೆ ನಿಗದಿ ಬೆಲೆಯಲ್ಲಿ ವಿತರಣೆ ಮಾಡಬೇಕು; ರೆವಿನ್ಯೂ ಭೂಮಿಯನ್ನು ಹೊಸ ಫಾರೆಸ್ಟ್ ಭೂಮಿಯನ್ನಾಗಿ ಪರಿವರ್ತನೆಗೊಳಿಸುವ ಕಾಯ್ದೆಯನ್ನು ರದ್ದುಗೊಳಿಸಬೇಕು; ಬಡ ಮತ್ತು ಮಧ್ಯಮ ರೈತರ ಮೇಲಿರುವ ಎಲ್ಲಾ ಸೊಸೈಟಿ ಮತ್ತು ಬ್ಯಾಂಕು ಸಾಲಗಳ ಮೇಲೆ ಸಸ್ತಿ ಬಡ್ಡಿದರ ರದ್ದಾಗಬೇಕು ಮತ್ತು ಜಪ್ತಿ ಹಾಗೂ ಏಲಂಗಳು ರದ್ದಾಗಬೇಕು ಮತ್ತು ತಳೂರು ಬಂಡೆ ಕಾರ್ಮಿಕರ ಬೇಡಿಕೆಗಳನ್ನು ಸರಕಾರ ಕೂಡಲೇ ಈಡೇರಿಸಬೇಕು ಎಂಬಿವೇ ಬೇಡಿಕೆಗಳನ್ನು ತಹಸೀಲ್ದಾರರಿಗೆ ಒಪ್ಪಿಸಲಾಗಿದೆ. ಸೀಮೆಎಣ್ಣೆಯನ್ನು ಭಾನುವಾರದಂದು ತಾಲ್ಲೂಕಿನ ಎಲ್ಲಾ ಕಡೆಗಳಲ್ಲೂ ಒದಗಿಸುವ ಭರವಸೆಯನ್ನು ತಹಸೀಲ್ದಾರರವರು ಸ್ಥಳದಲ್ಲೆ ಇತ್ತರು.

ತಾಲ್ಲೂಕು ರೈತಸಂಘದ ಕಾರ್ಯದರ್ಶಿ ಕಾಂ. ಕೆ. ಮೋನಪ್ಪಗೌಡರು ಸ್ವಾಗತ ಭಾಷಣ ಮಾಡಿದ ಮೇಲೆ, ಸುಳ್ಯ ಗ್ರಾಮ ರೈತಸಂಘದ ಅಧ್ಯಕ್ಷ ಕಾಂ. ಶಿವಣ್ಣಗೌಡರು ಬಹಿರಂಗ ಸಭೆಯ ಅಧ್ಯಕ್ಷ ಸ್ಥಾನ ವಹಿಸಿದರು. "ಭೂಮಿಗಾಗಿ, ಕೂಲಿಗಾಗಿ ಮತ್ತು ನ್ಯಾಯಕ್ಕಾಗಿ ಸುಸಂಘಟಿತಹೋರಾಟ" ಮಾಡಲು ಸಭೆಯನ್ನುದ್ದೇಶಿಸಿ ಮಾತನಾಡಿದ ತಾಲ್ಲೂಕು ರೈತಸಂಘ ಅಧ್ಯಕ್ಷ ಕಾಂ. ಸೂರ್ಯನಾರಾಯಣ ಭಟ್ ಕರೆ ಇತ್ತರು. ದಲಿತರ ಮತ್ತು ರೈತರ ಹೋರಾಟವನ್ನು ಐಕ್ಯತೆಯಿಂದ ನಡೆಸಲು ದಲಿತ ಸಂಘರ್ಷ ಸಮಿತಿ ಕಾರ್ಯದರ್ಶಿ ಕಾಂ. ಬಿ. ರಾಮಕೃಷ್ಣ ಕರೆ ಇತ್ತರು. "ಬ್ಯಾಂಕು ನೌಕರರು, ವಿಮಾ ಇಲಾಖೆ ನೌಕರರು, ಪೋಲೀಸರೂ ಸೇರಿದಂತೆ ಎಲ್ಲಾ ವಿಭಾಗದ ನೌಕರರು ಇಂದು ಸಂಘಟಿತರಾಗಿ ಹೋರಾಡುವಾಗ, ಇವರೆಲ್ಲರಿಗಿಂತಲೂ ಹೆಚ್ಚಿಗೆ ಕಷ್ಟದಲ್ಲಿರುವ ಕೃಷಿ ಕೂಲಿಗಾರರೂ, ಹಳ್ಳಿಯ ಬಡವರೂ ಇವರಂತೆಯೇ ಸಂಘಟಿತ ಹೋರಾಟವನ್ನು" ನಡೆಸಲು ಪ್ರಾಂತ ರೈತಸಂಘದ ಪ್ರಧಾನ ಕಾರ್ಯದರ್ಶಿ ಕಾ. ಪಿ. ರಾಮಚಂದ್ರರಾಯರು ಕರೆ ಇತ್ತರು.

ದೇಶದಲ್ಲಿನ ಪ್ರಸ್ತುತ ರಾಜಕೀಯ ಪರಿಸ್ಥಿತಿ ಮತ್ತು ಮಾರ್ಕ್ಸ್‌ವಾದಿಕಮ್ಯುನಿಸ್ಟ್ ಪಕ್ಷದ ನಿಲುಮೆಯನ್ನು ವಿವರಿಸುತ್ತಾ,ಆರ್.ಎಸ್.ಎಸ್. ನಿಯಂತ್ರಿತ ಜನತಾಪಕ್ಷ ಮತ್ತು ಸರ್ವಾಧಿಕಾರಿ ಇಂದಿರಾ ಕಾಂಗ್ರೆಸನ್ನು ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಸೋಲಿಸಲು ಪಕ್ಷದ ರಾಜ್ಯಸಮಿತಿಯ ಕಾರ್ಯದರ್ಶಿ ಕಾಂ. ಎಂ. ಕೆ. ಭಟ್‌ರವರು ಕರೆ ಇತ್ತರು. ರಾಜ್ಯದಲ್ಲಿ ಕರ್ನಾಟಕ ಕಾಂಗ್ರೆಸ್, ಸಿ. ಪಿ. ಐ. ಮತ್ತು ಇತರ ಸಮಾನ ಅಭಿಪ್ರಾಯವುಳ್ಳ ಪಕ್ಷಗಳೊಂದಿಗೆ ಹೊಂದಾಣಿಕೆ ಮಾಡಿ ಚುನಾವಣೆಯಲ್ಲಿ ಸ್ಪರ್ಧಿಸಲಾಗುವುದು ಎಂದು ಸಾರಿದರು. ತೋಟ ಕೆಲಸಗಾರರ ಸಂಘದ ಕಾರ್ಯದರ್ಶಿ ಕಾಂ. ಕಾತ ಮುತ್ತು ಅವರು ಪ್ಲಾಂಟೇಷನ್ ಕಾರ್ಮಿಕರೂ, ರೈತರೂ ಒಂದಾಗಿ ಹೋರಾಡಲು ಕರೆ ಇತ್ತರು. ಅಧ್ಯಕ್ಷರ ಭಾಷಣವಾದ ಮೇಲೆ ಸುಳ್ಯ ಗ್ರಾಮದ ರೈತಸಂಘದ ಕಾರ್ಯದರ್ಶಿ ಕಾಂ. ಬಾಲಕೃಷ್ಣ ಬೈಪಾಡಿತ್ತಾಯ ಅವರಿಂದ ವಂದನಾರ್ಪಣೆಯೊಂದಿಗೆ ಸಭೆ ಮುಕ್ತಾಯವಾಯಿತು. ಐದರಂದು ನಡೆದ ಮತ ಪ್ರದರ್ಶನವು ಇತ್ತೀಚೆಗಿನ ದಿನಗಳಲ್ಲಿ ನಡೆದ ಭಾರಿ ಪ್ರದರ್ಶನವಾಗಿತ್ತು.

●

ರೈತಸಂಘದ ಸಭೆ

ಕುಣಿಗಲ್ ತಾಲ್ಲೂಕು, ನಡೆಮಾವಿನಪುರ ಗ್ರಾಮದಲ್ಲಿ ತಾರೀಖು 3-11-79 ರಂದು ರೈತರ ಬಹಿರಂಗ ಸಭೆ ನಡೆಯಿತು. ಜಿಲ್ಲಾ ಸಮ್ಮೇಳನದ ತೀರ್ಮಾನದಂತೆ, ರೈತರ ಸಂಘಟನೆಯನ್ನು ಬಲಪಡಿಸುವ ಯತ್ನವಾಗಿ ಈ ಸಭೆ ಸೇರಿಸಲಾಗಿತ್ತು. ನಡೆಮಾವಿನಪುರ, ನಂಜಿಚಿನ್ನಿಪಾಳ್ಯ, ಬಸವನಮತ್ತೀಕೆರೆ, ಬೋಠಲಿಂಗನಪಾಳ್ಯ ಮತ್ತಿತರ ಗ್ರಾಮಗಳಿಂದ ಬಂದ ರೈತರು ಅರ್ಧ ರಾತ್ರಿಯವರೆಗೂ ನಡೆದ ಬಹಿರಂಗ ಸಭೆಯಲ್ಲಿ ಉತ್ಸುಕತೆಯಿಂದ ಭಾಗವಹಿಸಿದ್ದರು.

ತಾಲ್ಲೂಕು ರೈತಸಂಘದ ಅಧ್ಯಕ್ಷ ಕಾಂ. ಲಿಂಗದೇವರು ಇವರ ಅಧ್ಯಕ್ಷತೆಯಲ್ಲಿ ನಡೆದ ಸಭೆಗೆ ರಾಜ್ಯ ಬೀಡಿ ಫೆಡರೇಶನ್ನಿನ ಕಾರ್ಯದರ್ಶಿ ಕಾಂ. ಮಹಮ್ಮದ್ ದಸ್ತಗೀರ್, ಕುಣಿಗಲ್ ನಗರಸಭೆ ಉಪಾಧ್ಯಕ್ಷ ಕಾಂ. ಯೂನುಸ್ ಖಾನ್, ಸ್ಥಳೀಯ ರೈತ, ಕಾರ್ಮಿಕ ಮುಖಂಡ ಕಾಂ. ಅಂಜಪ್ಪ, ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ತಾಲ್ಲೂಕು ಕಾರ್ಯದರ್ಶಿ ಕಾಂ. ಬಡೇಸಾಬ್ ಹಾಗೂ ಭಾರತ ವಿದ್ಯಾರ್ಥಿ ಫೆಡರೇಶನ್ ರಾಜ್ಯಶಾಖೆ ಅಧ್ಯಕ್ಷ ಕಾಂ. ಇಕ್‌ಬಾಲ್ ಹುಸೇನ್ ಮುಖ್ಯಅತಿಥಿಗಳಾಗಿ ಭಾಗವಹಿಸಿದ್ದರು ಸಭೆಯಲ್ಲಿ, ರೈತರು ಸಂಘಟಿತರಾಗಿ ತಮ್ಮ ಹಕ್ಕುಗಳಿಗಾಗಿ ಹೋರಾಟ ಮಾಡಬೇಕಾದ ಅವಶ್ಯಕತೆಯನ್ನು ವಿವರಿಸಲಾಯಿತು. ಹಾಗೂ ನಮ್ಮ ಸಮಾಜದ ಆರ್ಥಿಕ, ಸಾಮಾಜಿಕ ಅಸಮಾನತೆಯನ್ನು ಪೋಷಿಸುತ್ತಿರುವ ರಾಜಕೀಯ ಪರಿಸ್ಥಿತಿಯನ್ನು ಮನವರಿಕೆ ಮಾಡಿಕೊಡಲಾಯಿತು.

ಕ್ರಾಂತಿ ಗೀತೆಗಳನ್ನು ಕಾಂ. ರಂಗಹನುಮಯ್ಯನವರು ಹಾಡಿದರು. ತಾಲ್ಲೂಕು ರೈತಸಂಘದ ಕಾರ್ಯದರ್ಶಿ ಕಾಂ. ಬಿ. ಜಿ ಗಂಗಾಧರ್‌ರವರು ತಾಲ್ಲೂಕಿನಲ್ಲಿ ರೈತರು ಎದುರಿಸುತ್ತಿರುವ ಸಮಸ್ಯೆಗಳನ್ನು ವಿವರಿಸಿದರು.

●

ಕರ್ನಾಟಕ ತೋಟಕಾರ್ಮಿಕರ ಸಂಘದ ಮಹಾಸಭೆ

ಕರ್ನಾಟಕ ತೋಟ ಕಾರ್ಮಿಕರ ಸಂಘದ ಮಹಾಸಭೆಯು ದಿನಾಂಕ 31-10-79ರಂದು ಕಾಂ. ಸಿ. ನಂಜುಂಡಪ್ಪನವರ ಅಧ್ಯಕ್ಷತೆಯಲ್ಲಿ ಸಕಲೇಶಪುರದಲ್ಲಿ ಜರುಗಿತು.

ಮಹಾಸಭೆಯಲ್ಲಿ ತಮಿಳುನಾಡಿನ ತೋಟ ಕಾರ್ಮಿಕ ನಾಯಕರೂ. ನಾಗರಕೋಯಿಲ್‌ನ ಶಾಸಕರೂ ಆಗಿದ್ದು ಇತ್ತೀಚೆಗೆ ನಿಧನರಾದ ಕಾಂ. ಜಿ.ಎಸ್. ಮಣಿಯವರಿಗೂ, ಕರ್ನಾಟಕದ ಖ್ಯಾತಿವೆತ್ತ ಕಾರ್ಮಿಕ ನಾಯಕರೂ, ಮೈಸೂರು ಶಾಸನ ಸಭೆಯ ಪ್ರಥಮ ಕಮ್ಯುನಿಸ್ಟ್ ಶಾಸಕರೂ, ಹಿಂದಿನ ಸಿ. ಐ.ಟಿ.ಯು. ರಾಷ್ಟ್ರೀಯ ಮಂಡಳಿ ಸದಸ್ಯರೂ ಆಗಿದ್ದು ಇತ್ತೀಚೆಗೆ ನಿಧನರಾದ ಕಾಂ. ಕೆ. ಎಸ್. ವಾಸನ್‌ರವರಿಗೂ, ಶ್ರೀ ಜಯಪ್ರಕಾಶ ನಾರಾಯಣರಿಗೂ ಶ್ರದ್ಧಾಂಜಲಿ ಅರ್ಪಿಸಲಾಯಿತು. ರೈತ ಕಾರ್ಮಿಕ ಮತ್ತು ಪ್ರಜಾಪ್ರಭುತ್ವ ಚಳುವಳಿಗಳಲ್ಲಿ ಪೋಲೀಸ್ ಗುಂಡಿನೇಟಿಗೆ, ಗೂಂಡಾಗಳಿಗೆ ಬಲಿಯಾದ ಎಲ್ಲಾ ಹುತಾತ್ಮರಿಗೂ ಶ್ರದ್ಧಾಂಜಲಿ ಅರ್ಪಿಸಲಾಯಿತು.

ಪ್ರಧಾನ ಕಾರ್ಯದರ್ಶಿಯವರು ಸಂಘದ ಕಾರ್ಯಚಟುವಟಿಕೆಗಳ ಬಗ್ಗೆ ಲಿಖಿತ ವರದಿಯಿತ್ತರು. ದೀರ್ಘ ಚರ್ಚೆಯ ನಂತರ ವರದಿ ಸರ್ವಾನುಮತದಿಂದ ಅಂಗೀಕರಿಸಲ್ಪಟ್ಟಿತು.

ದಾಂಡೇಲಿಯ ಫೆರ್ರೋ ಅಲಾಯ್ಸ್ ಕಾರ್ಖಾನೆಯ ಕಾರ್ಮಿಕರ ಹೋರಾಟವನ್ನು ಬೆಂಬಲಿಸುವ, ಬೆಂಗಳೂರಿನ ಮೈಕೋ ಕಾರ್ಖಾನೆಯ ಮತ್ತು ಹೋಟೆಲ್ ಕೆಲಸಗಾರರ ಮುಷ್ಕರಗಳನ್ನು ಬೆಂಬಲಿಸುವ ಗೊತ್ತುವಳಿಗಳನ್ನು ಅಂಗೀಕರಿಸಲಾಯಿತು.

ತೋಟಗಳಲ್ಲಿ ಚೆಂಗೂಲಿ ಪದ್ಧತಿ, ಕಾಂಟ್ರಾಕ್ಟ್ ಪದ್ಧತಿ ಮತ್ತು ಹದಿನಾರು ದಿನದ ಪಟ್ಟಿಯ ಪದ್ಧತಿಯನ್ನು ರದ್ದುಮಾಡುವಂತೆ, ಒಪ್ಪಂದವಾದ ಸಂಬಳವನ್ನು ಕನಿಷ್ಟ ವೇತನವೆಂದು ನಿಗದಿ ಮಾಡುವ ಮೂಲಕ ಎಲ್ಲಾ ತೋಟ ಕೆಲಸಗಾರರಿಗೂ ಒಪ್ಪಂದದ ಸಂಬಳ ದೊರೆಯುವಂತೆ ಮಾಡಲು, ಮತ್ತು ತೋಟ ಕಾರ್ಮಿಕರ ಕಾನೂನನ್ನು ಪರಿಣಾಮಕಾರಿಯಾಗಿ ಜಾರಿ ಮಾಡಿಸುವಂತೆ ಸರಕಾರವನ್ನು ಒತ್ತಾಯಿಸುವ ಠರಾವುಗಳನ್ನು ಅಂಗೀಕರಿಸಲಾಯಿತು.

ತೋಟದಲ್ಲಿ ಖಾಯಂ ಕೆಲಸಗಾರರನ್ನಿಡದೆ ದೂರದಿಂದ ಕಾರ್ಮಿಕರನ್ನು ಟ್ರಾಕ್ಟರ್, ಲಾರಿಗಳಲ್ಲಿ ಕರೆತಂದು ಕಡಿಮೆ ಸಂಬಳ ಕೊಟ್ಟು ಇತರ ಯಾವುದೇ ಸವಲತ್ತುಗಳನ್ನು ಕೊಡದೆ ವಂಚಿಸುವ ಪದ್ಧತಿ ಈಗೀಗ ಹೆಚ್ಚುತ್ತಿದೆ. ಇತ್ತೀಚೆಗೆ ಬಾಳ್ಳುಪೇಟೆಯ ಬಿ. ಟಿ. ಎಸ್ಟೇಟಿಗೆ ಹಳ್ಳಿಯೊಂದರಿಂದ ಟ್ರಾಕ್ಟರ್‌ನಲ್ಲಿ ಕಾರ್ಮಿಕರನ್ನು ಒಯ್ಯುತ್ತಿರುವಾಗ ಅಪಘಾತವಾಗಿ ಎರಡು ಜನ ಕಾರ್ಮಿಕರು ಮಡಿದಿದ್ದಾರೆ. ಗತಿಸಿದ ಕಾರ್ಮಿಕರಿಗೆ ಶ್ರದ್ಧಾಂಜಲಿ ಅರ್ಪಿಸುವುದರೊಂದಿಗೆ ಈ ಕಾರ್ಮಿಕರ ಕುಟುಂಬಗಳಿಗೆ ಮಾಲೀಕರು ಮತ್ತು ಸರಕಾರ ಪರಿಹಾರ ಕೊಡಬೇಕೆಂದು ಒತ್ತಾಯಿಸುವ ಹಾಗೂ, ಎಲ್ಲರಿಗೂ ಅವರು ವಾಸವಿರುವ ಜಾಗದ ಬಳಿಯೇ ಕೆಲಸ ಒದಗಿಸುವ ಈ ರೀತಿಯ ಕಾರ್ಮಿಕರ ಶೋಷಣೆಯನ್ನು ನಿಷೇಧಿಸುವ ದಿಸೆಯಲ್ಲಿ ಸರಕಾರ ತಕ್ಷಣ ಕಾರ್ಯಪ್ರವೃತ್ತವಾಗಬೇಕೆಂದು ಸಭೆಯು ಒತ್ತಾಯಿಸಿತು.

ಕಾಂ. ಸಿ. ನಂಜುಂಡಪ್ಪನವರು ಅಧ್ಯಕ್ಷರಾಗಿಯೂ, ಕಾಂ. ವಿ. ಸುಕುಮಾರ್ ಪ್ರಧಾನ ಕಾರ್ಯದರ್ಶಿಯಾಗಿಯೂ, ಕಾಂ. (ಶ್ರೀಮತಿ) ಚಂಪಾ ಉಪಾಧ್ಯಕ್ಷರಾಗಿಯೂ, ಕಾಂ. ಪಾಲ್ ಯುಜಿನ್ ಡಿ. ಸೋಜ ಉಪಕಾರ್ಯದರ್ಶಿಯಾಗಿ ಮತ್ತು ಕಾಂ. ದೂಜರವರು ಖಜಾಂಚಿಯಾಗಿ ಸರ್ವಾನುಮತದಿಂದ ಆಯ್ಕೆಯಾದರು. 15 ಜನ ಸದಸ್ಯರಿರುವ ಕಾರ್ಯಕಾರಿ ಸಮಿತಿಯನ್ನು ಚುನಾಯಿಸಲಾಯಿತು.

○

ಶಿರಸಿಯಲ್ಲಿ ಕಟ್ಟಿಗೆ ದರ ವಿರೋಧಿ ಬಹಿರಂಗ ಸಭೆ

ಬರುವ ಜನವರಿ 1 ರಿಂದ ಉರವಲ ಕಟ್ಟಿಗೆದರ ಈಗಿದ್ದದರ ಎರಡು ಪಟ್ಟು ಮಾಡುವ ಸನ್ನದ್ಧತೆಯನ್ನು ಆಳುವ ಸರಕಾರ ನಡೆಸಿದ್ದನ್ನು ವಿರೋಧಿಸಿ ತಾ. 1-11-79 ರಂದು ಸಂಜೆ 6 ಗಂಟೆಗೆ ಶಿರಸಿ ಬೀಡ್ಕಿಬೈಲಿನಲ್ಲಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿಯ ನೇತೃತ್ವದಲ್ಲಿ ಬಹಿರಂಗ ಸಭೆಯನ್ನು ನಡೆಸಲಾಯಿತು. ಸಭೆಯನ್ನುದ್ದೇಶಿಸಿ ಕಾಂ. ಎಂ. ವಿ. ಪುಲಕರ ಮತ್ತು ಕಾಂ. ಪರಶುರಾಮ ಮಶಾಲ್ದಿ ಮತ್ತು ಕಾಂ.ಬಂಗಾರೇಶ್ವರರು ಮಾತನಾಡಿದರು. ಸಭೆಯ ಅಧ್ಯಕ್ಷತೆಯನ್ನು ಶಿರಸಿಯ ಪ್ರಸಿದ್ಧನ್ಯಾಯವಾದಿಗಳೂ ಪಕ್ಷದ ಮುಂದಾಳುಗಳೂ ಆದ ಕಾಂ. ಎಂ.ಎಸ್, ಧಾರೇಶ್ವರರು ವಹಿಸಿದ್ದರು. ಸಭೆಯಲ್ಲಿ ತಾ. 2-11-79 ಕ್ಕೆ ಡಿ.ಎಫ್.ಓ. ರವರಿಗೆ ಶಿರಸಿ ನಾಗರಿಕರ ವತಿಯಿಂದ ಕಟ್ಟಿಗೆ ದರ ಇಳಿಸಲು ಒಂದು ಮನವಿಯನ್ನು ಕೊಡಲು ತೀರ್ಮಾನಿಸಿ, ಸರಕಾರ ಇದನ್ನು ಮಾಡದಿದ್ದಲ್ಲಿ ಮುಂದೆ ಬಲವಾದ ಆಂದೋಲನವನ್ನು ಉತ್ತರ ಕನ್ನಡ ಜಿಲ್ಲೆಯಾದ್ಯಂತ ನಡೆಸಲು ತೀರ್ಮಾನಿಸಲಾಯ್ತು. ಕೊನೆಗೆ ಧನ್ಯವಾದದೊಂದಿಗೆ ಸಭೆಯು ಮುಕ್ತಾಯವಾಯಿತು.

○

ಸೋಮಯ್ಯ ಸಕ್ಕರೆ ಕಾರ್ಖಾನೆ ಕೆಲಸಗಾರರ ಮುಷ್ಕರ

ಬಿಜಾಪುರ ಜಿಲ್ಲೆಯ ಸಮೀರವಾಡಿಯಲ್ಲಿ ಸೋಮಯ್ಯ ಸಕ್ಕರೆ ಕಾರ್ಖಾನೆ ಕೆಲಸಗಾರರ ಮುಷ್ಕರ 100ನೇ ದಿನ ಮುಟ್ಟಿದೆ. ಮೂರನೇ ವೇಜ್ ಬೋರ್ಡಿನ ಹೆಚ್ಚಿನ ಪಗಾರ ಹಾಗೂ ಫೆಬ್ರವರಿ ತಿಂಗಳಲ್ಲಾದ ಒಪ್ಪಂದದ ಪ್ರಕಾರ ಬೇಡಿಕೆಗಳನ್ನು ಜಾರಿಯಲ್ಲಿ ತರುವುದಕ್ಕಾಗಿ ಒಗ್ಗಟ್ಟಿನ ಮುಷ್ಕರ ನಡೆದಿದೆ. ಸಿ.ಐ.ಟಿ.ಯು., ಎ.ಐ.ಟಿ.ಯು.ಸಿ., ಕಬ್ಬುಬೆಳೆಯುವ ರೈತರೆಲ್ಲಾ ಈ ಹೋರಾಟಕ್ಕೆ ಬೆಂಬಲ ನೀಡುತ್ತಿದ್ದಾರೆ. 'ಸಕ್ಕರೆ ರಾಜ' ಅನಿಸಿಕೊಂಡಿರುವ ಸೋಮಯ್ಯ ಕೆಲಸಗಾರರ ಬೇಡಿಕೆಗಳಿಗೆ ಒಪ್ಪುತ್ತಿಲ್ಲ. ಕೆಲಸಗಾರರ ಬೇಡಿಕೆಗಳನ್ನು ಒಪ್ಪುತ್ತಿದ್ದರೆ ಮಾಲೀಕರು ಸಾಧಾರಣ 4 ಲಕ್ಷ ರೂ. ಗಳನ್ನು ಕಾರ್ಮಿಕರಿಗೆ ಕೊಡಬೇಕಾಗುತ್ತಿತ್ತು. ಮುಷ್ಕರದಿಂದ ಕಂಪೆನಿಗೆ ಇದರ 10ರಷ್ಟು ಹಾನಿಯಾಗಿದೆ. ಪ್ರತಿ ದಿವಸ ಪೋಲೀಸ್ ಸಿಬ್ಬಂದಿಗೆ ಓಡಾಡುವ ಖರ್ಚು ಸಾವಿರಾರು ರೂಪಾಯಿ. ಬಂಡವಾಳಶಾಹಿಗಳ ಸ್ವಭಾವವೇ ಹೀಗೆ.

ತಾ. 29-10-79 ರಂದು ಸಿ. ಐ. ಟಿ. ಯು. ಉಪಾಧ್ಯಕ್ಷ ಕಾಂ. ಎನ್.ಕೆ. ಉಪಾಧ್ಯಾಯರು ಸಮೀರವಾಡಿಯಲ್ಲಿ ಕಾರ್ಮಿಕರ ಬಹಿರಂಗ ಸಭೆಯನ್ನು ಉದ್ದೇಶಿಸಿ ಮಾತನಾಡುತ್ತಾ, ಬಂಡವಾಳಶಾಹಿ ವರ್ಗ ಮತ್ತು ಅದರ ಸರಕಾರ ದುಡಿಯುವವರನ್ನು ಹೇಗೆ ಸುಲಿಗೆ ಮಾಡುತ್ತಿದೆಯೆಂಬುದನ್ನು ಹೇಳಿ ಪ. ಬಂಗಾಳದ ಜ್ಯೋತಿಬಸು ಸರಕಾರ ಇಂತಹ ಹೋರಾಟಗಳನ್ನು ಹೇಗೆ ಬಗೆಹರಿಸಿದೆಯೆಂದು ವಿವರಿಸಿದರು. ಐಕ್ಯ ಹೋರಾಟವನ್ನು ಮುಂದುವರಿಸಿಕೊಂಡು ಹೋಗಬೇಕು. ಇದಕ್ಕಾಗಿ ಸಿ.ಐ.ಟಿ.ಯು. ಸಂಪೂರ್ಣ ಬೆಂಬಲ ಕೊಡುತ್ತದೆಯೆಂದು ಸಾರಿದರು.

ಸಕ್ಕರೆ ಕಾರ್ಖಾನೆ ನೌಕರರಿಗೆ ಬೆಂಬಲವಾಗಿ ಬಿಜಾಪುರದಲ್ಲಿ ನೂಲಿನ ಗಿರಣಿ ಮತ್ತಿತರ ಕಾರ್ಮಿಕರು 24 ಗಂಟೆಯ ಅನ್ನ ಸತ್ಯಾಗ್ರಹವನ್ನು ತಾರೀಖು 24-10-1979 ರಿಂದ ಪ್ರಾರಂಭಿಸಿದ್ದಾರೆ. ●

ಪೋಲೀಸರ ವರ್ತನೆಯ ಖಂಡನೆ

ಕುದುರೆಮುಖ ಕಬ್ಬಿಣದ ಅದಿರು ಯೋಜನೆ ಪ್ರದೇಶದ, ಹಿಂದುಸ್ತಾನ್ ಸ್ಟೀಲ್ ಕನ್‌ಸ್ಟ್ರಕ್ಷನ್ ಎಂಪ್ಲಾಯೀಸ್ ಅಸೋಸಿಯೇಶನ್‌ನ ಕಾರ್ಯಕಾರಿ ಸಮಿತಿ ಸಭೆ ತಾ. 31-10-79 ರಂದು ಕಾಂ. ಮೂಸಬ್ಬನವರ ಅಧ್ಯಕ್ಷತೆಯಲ್ಲಿ ಸಭೆ ಸೇರಿತ್ತು.

ಸಂಘದ ಸದಸ್ಯರ ಮೇಲೆ ಗೂಂಡಾಗಳ ಸತತದಾಳಿಯನ್ನು ಸಭೆಖಂಡಿಸಿತು. ಪೋಲೀಸರು ಗೂಂಡಾದಾಳಿಯಿಂದ ಕಾರ್ಮಿಕರನ್ನು ರಕ್ಷಿಸುವ ಬದಲು, ಸಂಘದಸದಸ್ಯರ ಮೇಲೆ ಲಾಠಿಛಾರ್ಜ್ ಮಾಡಿರುವುದು ಅಪರೋಕ್ಷವಾಗಿ ಸಮಾಜ ವಿರೋಧಿ ಶಕ್ತಿಗಳಿಗೆ ಸಹಾಯ ಮಾಡಿದಂತಾಗಿದೆ. ಆದ್ದರಿಂದ ಸರಕಾರ ಇಡೀ ಪ್ರಕರಣದ ಬಗ್ಗೆ ತನಿಖೆ ನಡೆಸಬೇಕೆಂದು ಸಭೆ ಒತ್ತಾಯಪಡಿಸಿತು.

ಈ ಘಟನೆಯಿಂದ ತೊಂದರೆಗೊಳಗಾಗಿ ಆಸ್ಪತ್ರೆ ಸೇರಿರುವ ಹಾಗೂ ಗಾಯಗಳಾಗಿರುವ ಕಾರ್ಮಿಕರಿಗೆ ಸಹಾಯ ನೀಡಲು ಸಂಘವು ತನ್ನ ಎಲ್ಲಾ ಸದಸ್ಯರಿಗೆ ಹಾಗೂ ಹಿತೈಷಿಗಳಿಗೆ ಕರೆ ನೀಡಿದೆ. ○

ಆದೇಶದ ನಂತರವೂ ವಿಳಂಬ

ಕೋಲಾರ ಜಿಲ್ಲಾ, ಶಿಡ್ಲಘಟ್ಟ ತಾಲ್ಲೂಕು, ಮಳ್ಳೂರು ಗ್ರಾಮದಲ್ಲಿ ಎಕ್ಸ್‌ಪ್ರೆಸ್ ಬಸ್ಸುಗಳನ್ನು ಕೋರಿಕೆಯ ಮೇರೆಗೆ ನಿಲ್ಲಿಸುವುದಕ್ಕೆ ಹಾಗೂ ಬಸ್ಸು ನಿಲ್ದಾಣಕ್ಕೆ ವ್ಯವಸ್ಥೆ ಮಾಡಿರುವುದಾಗಿ ರಾಜ್ಯ ಸಾರಿಗೆ ಸಂಸ್ಥೆ ಮಳ್ಳೂರು ಗ್ರಾಮಸ್ಥರಿಗೆ ತಾ. 31-5-76 ರಲ್ಲಿ ತಾನು ಹೊರಡಿಸಿದ ಪತ್ರದಲ್ಲಿ ತಿಳಿಸಿದೆ. ಅದೇ ರೀತಿ ಕೆಲವು ಎಕ್ಸ್‌ಪ್ರೆಸ್ ಬಸ್ಸುಗಳು ನಿಲ್ಲುತ್ತಿದ್ದುವು. ಆದರೆ, ಕಳೆದ ತಿಂಗಳಿಂದ ಬಸ್ಸುಗಳು ನಿಲ್ಲುತ್ತಿಲ್ಲವಾದ್ದರಿಂದ ಜನಗಳುತೊಂದರೆಗೊಳಗಾಗಿದ್ದಾರೆ. ಭರವಸೆ ನೀಡಿದ್ದಂತೆ ಬಸ್ ನಿಲ್ದಾಣವಾಗಲಿ, ಬಸ್ ನಿಲ್ಲುವ ಸ್ಥಳವೆಂಬ ನಾಮಫಲಕವಾಗಲಿ ಇದುವರೆಗೂ ಇಲಾಖೆಯವರು ಹಾಕಿಸುವ ಗೋಜಿಗೆ ಹೋಗಿಲ್ಲ. ಈ ಬಗ್ಗೆ ಕೂಡಲೇ ಗಮನಹರಿಸಿ ಜನರ ಕಷ್ಟವನ್ನು ಪರಿಹರಿಸಬೇಕೆಂದು, ಮಳ್ಳೂರು ಗ್ರಾಮಸ್ಥರು ರಾಜ್ಯ ರಸ್ತೆ ಸಾರಿಗೆ ಕಾರ್ಪೊರೇಷನ್, ಜನರಲ್ ಮ್ಯಾನೇಜರ್‌ರವರಿಗೆ ನೀಡಿರುವ ಮನವಿಯಲ್ಲಿ ಕೇಳಿಕೊಂಡಿದ್ದಾರೆ. ○

ಸ್ಟಾಲಿನ್ ಶತಮಾನೋತ್ಸವ

[2ನೇ ಪುಟದಿಂದ]

ಕಾರ್ಯಕ್ರಮವನ್ನು, ವಿಶ್ವದಲ್ಲೇ ಪ್ರಥಮ ಭಾರಿ ಜಾರಿಗೊಳಿಸಿದ ಮಹಾಪುರುಷ ಸ್ಟಾಲಿನ್ ಎಂದು ಹೇಳಿದರು. ವಿಶ್ವದಲ್ಲೆ ಹಿಂದುಳಿದ ರಾಷ್ಟ್ರಗಳಲ್ಲಿ ಒಂದೆನಿಸಿದ್ದ ರಷ್ಯ ದೇಶವನ್ನು ಅತ್ಯಂತ ಮುಂದುವರಿದ ಹಾಗೂ ಬಲಿಷ್ಟ ರಾಷ್ಟ್ರವನ್ನಾಗಿ ಮಾರ್ಪಾಟು ಮಾಡಿದರೆಂದೂ ಸರ್ವಾಧಿಕಾರಿ ಹಿಟ್ಲರ್‌ನ ವಿರುದ್ಧ ಹೋರಾಡಿ, ಸಮಾಜವಾದಿ ರಾಷ್ಟ್ರವನ್ನು ಉಳಿಸಿದ ಯುಗಪುರುಷನೆಂದರು. ಅವರ ವಿಚಾರಗಳನ್ನು ಪ್ರತಿಯೊಬ್ಬರು ಅಭ್ಯಾಸ ಮಾಡಿಕೊಳ್ಳಬೇಕೆಂದು ಹೇಳಿದರು. ಆರಂಭದಲ್ಲಿ ಎಸ್. ಎಫ್. ಐ. ನ ಕಾಂ. ರಾಜಣ್ಣನವರು ಕ್ರಾಂತಿ ಹಾಡುಗಳನ್ನು ಹಾಡಿದರು. ಕೊನೆಯಲ್ಲಿ ಪಿ. ಕೆ. ಸುಬ್ರಮಣಿಯವರು ವಂದನಾರ್ಪಣೆ ಮಾಡಿದರು. ○

ಸೋವಿಯೆತ್ ಯೂನಿಯನ್‌ಗೆ ಸಂದೇಶ

[ಒಂದನೇ ಪುಟದಿಂದ]

ವಾಗಬಹುದಿತ್ತೊ ಅಷ್ಟು ಆಗಿಲ್ಲವೆಂಬುದು ವಿಷಾದನೀಯ. ಶಾಂತಿ ಮತ್ತು ರಾಷ್ಟ್ರೀಯ ವಿಮೋಚನೆಗಾಗಿ ಎಲ್ಲಾ ಸಾಮ್ರಾಜ್ಯಶಾಹಿ ವಿರೋಧಿ ಶಕ್ತಿಗಳನ್ನು ಸನ್ನದ್ಧಗೊಳಿಸುವುದು ಮತ್ತು ಅಂತರರಾಷ್ಟ್ರೀಯ ಕಾರ್ಮಿಕ ವರ್ಗದ ಚಳವಳಿಯನ್ನು ಶೀಘ್ರವಾಗಿ ಬೆಳೆಸುವುದರಲ್ಲಿ ಈ ಭಿನ್ನಾಭಿಪ್ರಾಯಗಳು ತಡೆ ಒಡ್ಡಿವೆ. ಜಾಗತಿಕ ಶಾಂತಿ, ರಾಷ್ಟ್ರೀಯ ವಿಮೋಚನೆ, ಪ್ರಜಾಪ್ರಭುತ್ವ ಮತ್ತು ಸಮಾಜವಾದಗಳಿಗೆ ಧಕ್ಕೆ ಬರುವಂತೆ ಜಗತ್ತಿನ ಹಲವೆಡೆ ಸಾಮ್ರಾಜ್ಯಶಾಹಿಯು ಆಕ್ರಮಣ ಮಾಡುವುದಕ್ಕೆ ಈ ಭಿನ್ನಾಭಿಪ್ರಾಯಗಳು ಪ್ರೋತ್ಸಾಹ ನೀಡಿವೆ.

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷವು ಸೋವಿಯೆತ್ ಯೂನಿಯನ್ನಿನ ಧೋರಣೆಗಳನ್ನು ಟೀಕಿಸುತ್ತಾ ಬಂದಿದೆ ಮತ್ತು ತನಗಿರುವ ಭಿನ್ನಾಭಿಪ್ರಾಯವನ್ನು ಸ್ಪಷ್ಟಗೊಳಿಸಿದೆ. ಆದರೆ ಅದೇ ಸಂದರ್ಭದಲ್ಲಿ ಸೋವಿಯೆತ್ ಯೂನಿಯನ್ನನ್ನು ಸಮಾಜವಾದಿ-ಸಾಮ್ರಾಜ್ಯಶಾಹಿ (ಮಾವೋವಾದಿಗಳು ಹೇಳುವಂತೆ) ಯೆಂದಾಗಲೀ ಅಥವಾ ಚೈನಾವನ್ನು ಆಕ್ರಮಣಕಾರಿ ಮಿಲಿಟರಿ ದೇಶ (ಪರಿಷ್ಕರಣವಾದಿಗಳು ಹೇಳುವಂತೆ) ವೆಂದಾಗಲಿ ಸಿ. ಪಿ. ಐ. (ಎಂ) ಒಪ್ಪುವುದಿಲ್ಲ. ಸಿ. ಪಿ. ಐ. (ಎಂ) ಗೆ ಈ ಎರಡು ರಾಷ್ಟ್ರಗಳೂ ಸಮಾಜವಾದಿ ರಾಷ್ಟ್ರಗಳಾಗಿವೆ. ಮಾರ್ಕ್ಸ್‌ವಾದ-ಲೆನಿನ್‌ವಾದ ಮತ್ತು ಕಾರ್ಮಿಕ ವರ್ಗದ ಅಂತರಾಷ್ಟ್ರೀಯತೆಗಳ ಆಧಾರದಲ್ಲಿ ಅಂತರಾಷ್ಟ್ರೀಯ ಕಮ್ಯುನಿಸ್ಟ್ ಚಳುವಳಿಯಲ್ಲಿ ಐಕ್ಯತೆಯನ್ನು ತರುವುದಕ್ಕೆ ಸಿ. ಪಿ. ಐ. (ಎಂ) ತನ್ನ ಪುಟ್ಟ ಕೊಡುಗೆಯನ್ನು ನೀಡುತ್ತದೆ.

ಲೆನಿನ್ ಮತ್ತು ಸ್ಟಾಲಿನ್ ಅವರ ನೇತೃತ್ವದಲ್ಲಿ ಸೋವಿಯೆತ್ ಯೂನಿಯನ್ನಿನ ಕಮ್ಯುನಿಸ್ಟ್ ಪಕ್ಷವು ಕಮ್ಯುನಿಸ್ಟ್ ಅಂತರಾಷ್ಟ್ರೀಯಕ್ಕಿತ್ತ ಕೊಡುಗೆಯನ್ನು ನಾವು ಸದಾ ಸ್ಮರಿಸುತ್ತೇವೆ ಮತ್ತು ಬೇರೆಬೇರೆ ದೇಶಗಳಲ್ಲಿ ಕಮ್ಯುನಿಸ್ಟ್ ಪಕ್ಷಗಳನ್ನು ಬೆಳೆಸಲು ಕ. ಅಂತರಾಷ್ಟ್ರೀಯವಿತ್ತ ಸಹಾಯವನ್ನು ಸ್ಮರಿಸುತ್ತೇವೆ. ಅಕ್ಟೋಬರ್ ಮಹಾ ಕ್ರಾಂತಿಯ ಅರವತ್ತೆರಡನೆಯ ವಾರ್ಷಿಕೋತ್ಸವದ ಈ ಸಂದರ್ಭದಲ್ಲಿ ಸೋವಿಯೆತ್ ಕಮ್ಯುನಿಸ್ಟ್ ಪಕ್ಷ ಮತ್ತು ಜನತೆಗೆ ನಾವು ವಂದಿಸುತ್ತಾ, ಮುಂದಿನ ವರ್ಷಗಳಲ್ಲಿ ಇನ್ನೂ ಹೆಚ್ಚಿನ ಯಶಸ್ಸನ್ನು ಬಯಸುತ್ತೇವೆ. ●

ಚಾರಿತ್ರಿಕ ಸೌಹಾರ್ದ ಬೆಂಬಲ

[ಒಂದನೇ ಪುಟದಿಂದ]

ಕಾಂ. ಟಿ. ಎಮ್. ಎನ್. ನಂಬಿಯಾರ್ ಮತ್ತು ಕಾಂ. ದೀಪಕ್, ರಸ್ತೆ ಸಾರಿಗೆ ನೌಕರರ ಮುಂದಾಳು ಪ್ರತಾಪ್‌ಸಿಂಗ್, ಶಾಸಕ ಸಿ. ಎಮ್. ಇಬ್ರಾಹಿಮ್ ಮೊದಲಾದವರು ಭಾಷಣ ಮಾಡಿದರು. ಎಸ್. ಎಫ್. ಐ. ಮುಖಂಡ ಕಾಂ. ರಾಜಣ್ಣ ಅವರು ಮತ್ತು ಎ. ಐ. ಟಿ. ಯು. ಸಿ. ಯ ಕಾಮ್ರೇಡ್ ಅವರುಗಳು ಕ್ರಾಂತಿಗೀತೆಗಳನ್ನು ಹಾಡಿದರು.

ಅಕ್ಟೋಬರ್ ಮಹಾ ಕ್ರಾಂತಿಯ ದಿನದಂದು ನಗರದಲ್ಲಿ ನಡೆದ ಈ ಸೌಹಾರ್ದ ಕಾರ್ಯಕ್ರಮವು ಶ್ರಮಜೀವಿಗಳ ಬೆಳೆದು ಬರುತ್ತಲಿರುವ ಐಕ್ಯತೆಯ ಒಂದು ಸಂಕೇತ ಮತ್ತು ರಾಜ್ಯದ ಹೋರಾಟಕ್ಕೆ ಒಂದು ಹೊಸ ಸ್ಫೂರ್ತಿ. ನೆರೆದ ಸಭೆಯು ಸೋವಿಯೆತ್ ಜನತೆಗೆ ಅಕ್ಟೋಬರ್ ಮಹಾ ಕ್ರಾಂತಿಯ ಸಂತಸದ ದಿನದಂದು ತನ್ನ ಶುಭ ಸಂದೇಶವನ್ನೂ ಕಳುಹಿಸಿತು. ●

ಕಾರ್ಮಿಕರ ಅಕ್ರಮ ಬಂಧನ-ಸಿ.ಐ.ಟಿ.ಯು. ಖಂಡನೆ

[6ನೇ ಪುಟದಿಂದ]

ಸರ್ಕಾರದ ಮತ್ತು ಪೋಲೀಸರ ಈ ದೌರ್ಜನ್ಯವನ್ನು ಸಿ. ಐ. ಟಿ. ಯು. ಗೆ ಸೇರಿದ ಕೊಡಗು ಜಿಲ್ಲಾ ಜನರಲ್ ವರ್ಕರ್ಸ್ ಯೂನಿಯನ್ ತೀವ್ರವಾಗಿ ಖಂಡಿಸಿ ಬಂಧಿತರಾದವರನ್ನು ಕೂಡಲೇ ಬಿಡುಗಡೆ ಮಾಡದಿದ್ದರೆ ಜಿಲ್ಲೆಯಾದ್ಯಂತ ತೀವ್ರ ರೀತಿಯ ಚಳುವಳಿಯನ್ನು ನಡೆಸಬೇಕಾಗುತ್ತದೆ. ಸರ್ಕಾರವು ಈ ಬಗ್ಗೆ ಕೂಡಲೇ ಗಮನಹರಿಸಿ ಕಾರ್ಮಿಕರ ನ್ಯಾಯಯುತ ಹೋರಾಟಗಳಲ್ಲಿ ಪೋಲೀಸರು ಮಾಲೀಕರ ಪರವಾಗಿ ನಿಂತು ಕಾರ್ಮಿಕರಿಗೆ ಕಿರುಕುಳ ಕೊಡುವುದನ್ನು ತಪ್ಪಿಸಬೇಕೆಂದು ಕೋರುತ್ತದೆ.

ಈ ಬಗ್ಗೆ ಮುಖ್ಯಮಂತ್ರಿ ಹಾಗೂ ಐ.ಜಿ.ಪಿ. ಯವರಿಗೆ ಕೂಡಲೇ ಈ ಬಗ್ಗೆ ತನಿಖೆ ನಡೆಸಿ ಬಂಧಿತರಾದವರನ್ನು ಬಿಡುಗಡೆ ಮಾಡುವಂತೆ ತಂತಿ ಕೊಡಲಾಗಿದೆ.

ಇತ್ತೀಚೆಗೆ ಯೂನಿಯನ್ ಆಫೀಸಿಗೆ ತಲುಪಿದ ವರದಿ ಪ್ರಕಾರ ಶ್ರೀಮಂಗಲದಲ್ಲಿ 144 ಸೆಕ್ಷನ್ ಜಾರಿಮಾಡಿ ಸಿ.ಐ.ಟಿ.ಯು.ಗೆ ಸಂಬಂಧಿಸಿದವರೆಲ್ಲರನ್ನೂ ಅಕ್ರಮವಾಗಿ ಬಂಧಿಸಿ ಟೌನಿನಲ್ಲಿ ಭೀತಿಯ ವಾತಾವರಣವನ್ನು ಸೃಷ್ಟಿಸಲಾಗುತ್ತಿದೆ. ○

ಪರಿಸರ

ದಕ್ಷಿಣ ಕೊರಿಯಾ ಅಧ್ಯಕ್ಷ ಪಾರ್ಕ್ ಚುಂಗ್ ಹೀ ಅವರ ಕೊಲೆಗೆ ಸಿ.ಪಿ.ಐ. ಬಹುಶಃ ಕಾರಣವೆಂದು ಸೋವಿಯೆತ್ ಪತ್ರಿಕೆ "ಇಜ್‌ವೆಸ್ತಿಯಾ" ಆರೋಪಿಸಿದೆ.

—ಡೆಕ್ಕನ್ ಹೆರಾಲ್ಡ್

ಇಂದಿರಾಗಾಂಧಿ ಮತ್ತು ಕಾಂಗ್ರೆ ಏನಾದರೂ ಮತ್ತೆ ಅಧಿಕಾರಕ್ಕೆ ಬಂದರೆ 1980ರ ಚುನಾವಣೆಯೇ ಕೊನೇ ಚುನಾವಣೆ ಆದೀತು.

—ಉಪ ಪ್ರಧಾನಿ
ವೈ. ಬಿ. ಚವಾಣ್

ಎಲ್ಲಾ ರಾಜಕೀಯ ಪಕ್ಷಗಳೂ ಹಾಗೂ ಜನತೆ ಮಧ್ಯಕಾಲಿಕ ಲೋಕಸಭಾ ಚುನಾವಣೆಯನ್ನು ಮುಂದೂಡಬೇಕೆಂಬ ಬೇಡಿಕೆ ಬಂದಾಗಲೇ ಆ ವಿಷಯದಲ್ಲಿ ಯೋಚಿಸಲಾಗುವುದೇ ವಿನಃ ನಾವು (ಲೋಕದಳ) ನೀಡಿರುವ ತಾರೀಖಿನಂದೇ ಚುನಾವಣೆ ನಡೆಸಲು ನಿರ್ಧರಿಸಿ ಆಗಿದೆ. ಮುಂದೂಡುವ ಪ್ರಶ್ನೆಯೇ ಇಲ್ಲ.

—ಪ್ರಧಾನಿ ಚರಣಸಿಂಗ್
ಇಂಡಿಯನ್ ಎಕ್ಸ್‌ಪ್ರೆಸ್

'ಕೆಲಸಕ್ಕಾಗಿ ಆಹಾರ' ಕಾರ್ಯಕ್ರಮದ ಅಂಗವಾಗಿ ತುಮಕೂರು ಜಿಲ್ಲೆಗೆ ಸರ್ಕಾರ 3,000 ಕ್ವಿಂಟಾಲ್ ಗೋಧಿಯನ್ನು ಬಿಡುಗಡೆ ಮಾಡಲಾಗಿದ್ದು ಇಲ್ಲಿಯವರೆವಿಗೆ ಕೇವಲ 600 ಕ್ವಿಂಟಾಲ್ ಹಂಚಲಾಗಿದ್ದು ಉಳಿದ 2,400 ಕ್ವಿಂಟಾಲ್ ಗೋಧಿ ಕಣ್ಮರೆಯಾಗಿದೆ ಎಂದು ಹೇಳಲಾಗಿದೆ.

—ಡೆಕ್ಕನ್ ಹೆರಾಲ್ಡ್

ಸಿ. ಪಿ. ಐ. ಅಧ್ಯಕ್ಷ ಎಸ್. ಎ. ಡಾಂಗೆ ಹಾಗೂ ಅವರ ಪುತ್ರಿ ರೋಜಾದೇಸಪಾಂಡೆಯವರು ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಸ್ಪರ್ಧಿಸದಂತೆ ತಡೆಯಬೇಕೆಂದು ರಾಷ್ಟ್ರೀಯ ಮಂಡಳಿಯ ಸದಸ್ಯ ಎಸ್. ಜಿ. ಶೇಷಾದ್ರಿಯವರ ಯಾವುದೇ ಕಾಗದ ತಲುಪಿಲ್ಲ ಎಂದು ಸಿ. ರಾಜೇಶ್ವರರಾವ್ ಹೇಳಿದ್ದರೂ, ಶೇಷಾದ್ರಿಯವರು ವರದಿಗಾರರಲ್ಲಿ ಕಾಗದ ಬರೆದಿರುವುದನ್ನು ಸಮರ್ಥಿಸಿಕೊಂಡಿದ್ದಾರೆ.

—ಡೆಕ್ಕನ್ ಹೆರಾಲ್ಡ್

Printed by P. Ramachandra Rao at Nutan Printing Publishing & Training Centre, 405, Sampige Road, Malleswaram, Bangalore-560 003, and Published by him on behalf of the Communist Party of India (Marxist). Karnataka State Committee, L-56, K. V. Temple Street, Sultanpet, Bangalore-560 053.
Editorial and managerial office : L-56, K. V. Temple Street, Sultanpet, Bangalore-560 053. Phone : 24154
EDITOR : M. K. BHAT